ಸಂಪುಟ 01 | ಸಂಚಿಕೆ 170 | ಗುರುವಾರ 14 ಮೇ 2026 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೇಸೆ

NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ
ಮಾನ್ವಿ, ಲಿಂಗಸೂರು,
ರಾಯಚೂರ,ದೇವದುರ್ಗ
ಬಳ್ಳಾರಿ, ಕೊಪ್ಪಳ
ಯಾದಗಿರಿ, ಕಲಬುರ್ಗಿ,
ಬೀದರ, ವಿಜಯಪುರ.
ಗದಗ, ವಿಜಯನಗರ.
ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

1) ರಾಷ್ಟ್ರೀಯ ಸಭ್ಯತಾ ದಿನ

ಮೇ 14 ರಂದು ಆಚರಿಸಲಾಗುವ ರಾಷ್ಟ್ರೀಯ ಸಭ್ಯತಾ ದಿನವು ಪ್ರತಿಯೊಬ್ಬ ಅಮೇರಿಕನ್ನರು ಅರ್ಹವಾಗಿರುವ ನಾಗರಿಕತೆಯ ಮೂಲಭೂತ ಮಾನದಂಡವನ್ನು ಆಚರಿಸುತ್ತದೆ. DECENCY ಎಂಬುದು ದೈನಂದಿನ ಜೀವನದಲ್ಲಿ – ಸಂಭಾಷಣೆ ಮತ್ತು ಕ್ರಿಯೆಗಳಲ್ಲಿ – ಸಭ್ಯತೆಯನ್ನು ಪ್ರೇರೇಪಿಸಲು ಪ್ರಾರಂಭಿಸಲಾದ ಪಕ್ಷಾತೀತ ಜನಸಾಮಾನ್ಯರ ಚಳುವಳಿಯಾಗಿದೆ. ಜಾಗೃತಿ ಮೂಡಿಸುವ ಮೂಲಕ, ಶಾಲೆಗಳು ಮತ್ತು ಸ್ಥಳೀಯ ಸಮುದಾಯ ಗುಂಪುಗಳು DECENCY ಅನ್ನು ಅಳವಡಿಸಿಕೊಳ್ಳಲು ಮತ್ತು ಅದನ್ನು ಪಠ್ಯಕ್ರಮ ಯೋಜನೆಗಳು ಮತ್ತು ಸೇವಾ ಯೋಜನೆಗಳಲ್ಲಿ ಸಂಯೋಜಿಸಲು ಪ್ರೋತ್ಸಾಹಿಸುವ ಗುರಿಯನ್ನು ಈ ಆಂದೋಲನ ಹೊಂದಿದೆ.

## ಸುಭಾಷಿತ

ವೈಫಲ್ಯ ಎಂಬ ರೋಗವನ್ನು ಕೊಲ್ಲಲು ಆತ್ಮ ವಿಶ್ವಾಸ ಮತ್ತು ಕಠಿಣ ಕೆಲಸಗಳು ಅತ್ಯುತ್ತಮ ಔಷಧಿಗಳಾಗಿವೆ.

ಡಾ.ಎ.ಪಿ.ಜೆ.ಅಬ್ದುಲ್

# 144 ಶಾಸಕರ ಬೆಂಬಲದಿಂದ ವಿಶ್ವಾಸಮತ ಗೆದ್ದ ವಿಜಯ್

# ಎಐಎಡಿಎಂಕೆ ಇಬ್ಭಾಗ, ಡಿಎಂಕೆ ಸಭಾತ್ಯಾಗ



**ಚಿರಾಯು ಜ್ಞಾನಿ ಸುದ್ದಿ ಜಾಲ ಚೆನ್ನೈ:** ಮುಖ್ಯಮಂತ್ರಿ ಸಿ ಜೋಸೆಫ್ ವಿಜಯ್ ನೇತೃತ್ವದ ಟಿವಿಕೆ ಸರ್ಕಾರವು ಇಂದು ತಮಿಳುನಾಡು ವಿಧಾನಸಭೆಯಲ್ಲಿ ನಡೆದ ವಿಶ್ವಾಸ ಮತದಲ್ಲಿ ಗೆದ್ದು ಬೀಗಿದ್ದಾರೆ. ಸರ್ಕಾರಕ್ಕೆ 144 ಮಂದಿ ಶಾಸಕರು ಬೆಂಬಲ ವ್ಯಕ್ತಪಡಿಸಿದ್ದಾರೆ. ಟಿವಿಕೆ, ಕಾಂಗ್ರೆಸ್, ಸಿಪಿಎಂ, ಸಿಪಿಐ, ಮುಸ್ಲಿಮ್ ಲೀಗ್, ವಿಸಿಕೆ ಜೊತೆ ಎಐಎಡಿ-ಎಂಕೆಯ ಬಂಡಾಯ ಎದ್ದಿರುವ 27 ಶಾಸಕರು ವಿಜಯ್ ಸರ್ಕಾರಕ್ಕೆ ಬೆಂಬಲ ನೀಡಿದ್ದಾರೆ.

ಬಹುಮತ ಸಾಬೀತು ಪಡಿಸುವ ವೇಳೆ ಡಿಎಂಕೆ ಮತ್ತು ಪಿಎಂಕೆ ಶಾಸಕರು ಸಭಾತ್ಯಾಗ ಮಾಡಿದರು. ಒಬ್ಬ ಬಿಜೆಪಿ ಶಾಸಕರು ಮತದಾನದಿಂದ ದೂರ ಉಳಿದರು. ಅದರೆ ಸದನದಲ್ಲಿದ್ದ 22 ಎಐಡಿಎಂಕೆ ಶಾಸಕರು ವಿಶ್ವಾಸಮತದ ವಿರುದ್ಧ ಮತ ಹಾಕಿದರು. ವಿಶ್ವಾಸಮತದ ಮೂಲಕ ಅವರು ತಮ ಸರ್ಕಾರಕ್ಕೆ ಅಗತ್ಯವಾದ ಬಹುಮತವನ್ನು ಸ್ಪಷ್ಟವಾಗಿ ಸಾಬೀತುಪಡಿಸಿದ್ದಾರೆ. ವಿಧಾನಸಭೆಯಲ್ಲಿ ನಡೆದ ಈ ಮಹತ್ವದ ತಲೆ ಎಣಿಕೆ ಮತದಾನದ ಫಲಿತಾಂಶ, ವಿಜಯ್ ಅವರ ರಾಜಕೀಯ ಭವಿಷ್ಯಕ್ಕೂ, ಅವರ ಸರ್ಕಾರದ ಸ್ಥಿರತೆಗೂ ಬಹಳ ಮುಖ್ಯವಾದ ಹಂತವಾಗಿದೆ. ವಿಶ್ವಾಸ ಮತದ ಪ್ರಕ್ರಿಯೆಯಲ್ಲಿ ತಲೆ ಎಣಿಕೆ ಮೂಲಕ ಮತ ಎಣಿಕೆ ಮಾಡಿ ಫಲಿತಾಂಶವನ್ನು ವಿಧಾನಸಭೆಯ ಸ್ಪೀಕರ್ ಅಧಿಕೃತವಾಗಿ ಘೋಷಣೆ ಮಾಡಿದರು.

ಈ 144 ಶಾಸಕರಲ್ಲಿ ಟಿವಿಕೆ ಮೈತ್ರಿಕೂಟದ 118 ಶಾಸಕರು ಸೇರಿದ್ದಾರೆ. ಇವರ ಜೊತೆಗೆ ಎಐ-ಎಡಿಎಂಕೆಯ 26 ಬಂಡಾಯ ಶಾಸಕರು ಕೂಡ ವಿಜಯ್ ಪರವಾಗಿ ಮತ ಚಲಾಯಿಸಿದ್ದಾರೆ. ಅಲ್ಲದೆ ಮನ್ನಾರ್‌ಗುಡಿಯ ಮೂಲದ ಎಎಂಎಂಕೆ ಪಕ್ಷದ 1 ಶಾಸಕರು ಕೂಡ ವಿಜಯ್ ಅವರಿಗೆ ಬೆಂಬಲ ನೀಡಿದ್ದಾರೆ. ಈ ಮೂರು ವಿಭಿನ್ನ ರಾಜ-ಕೀಯ ಶಕ್ತಿಗಳ ಬೆಂಬಲದಿಂದ ವಿಜಯ್ ಅವರ ಸಂಖ್ಯಾಬಲ ಇನ್ನಷ್ಟು ಗಟ್ಟಿಯಾದಂತಾಗಿದೆ. ಸದನ ಸಮಾವೇಶಗೊಂಡ ತಕ್ಷಣ, ಮುಖ್ಯಮಂತ್ರಿ ವಿಜಯ್ ವಿಶ್ವಾಸ ಮತ ನಿರ್ಣಯವನ್ನು ಮಂಡಿಸಿದರು ಮತ್ತು ಎಲ್ಲಾ ಪಕ್ಷಗಳಿಗೆ ಸೇರಿದ ಶಾಸಕರು ಈ ನಿರ್ಣಯದ ಕುರಿತು ಮಾತನಾಡಿದರು.

ವಿಭಾಗವಾರು ಮತದಾನ ನಡೆಸಿದ ನಂತರ, ಸ್ಪೀಕರ್ ಜೆಸಿಡಿ ಪ್ರಭಾಕರ್, ಮುಖ್ಯಮಂತ್ರಿ ವಿಧಾನಸಭೆಯ ವಿಶ್ವಾಸ ಮತ ಯಾಚನೆಗಾಗಿ ಮಂಡಿಸಿದ ನಿರ್ಣಯವು ಗೆದ್ದಿದೆ ಎಂದು ಘೋಷಿಸಿದರು. 144 ಶಾಸಕರು ಸರ್ಕಾರಕ್ಕೆ ಮತ ಚಲಾಯಿಸಿದರು, 22 ಶಾಸಕರು ವಿರೋಧಿಸಿದರು ಮತ್ತು ಪಿಎಂಕೆ ಮತ್ತು ಬಿಜೆಪಿ ಸೇರಿದಂತೆ ಐದು ಮಂದಿ ತಟಸ್ಥ ನಿಲುವು ತೆಗೆದುಕೊಂಡರು. ಪ್ರಧಾನ ವಿರೋಧ ಪಕ್ಷ ಡಿಎಂಕೆ ನಿರ್ಣಯದ ಮೇಲೆ ಮತ ಚಲಾಯಿಸುವ ಮೊದಲು ಸದನದಿಂದ ಹೊರನಡೆದರು.

ಎಎಂಎಂಕೆಯಿಂದ ಹೊರಹಾಕಲ್ಪಟ್ಟ ಶಾಸಕ ಎಸ್.

3ನೇ ಪುಟಕ್ಕೆ

## ನೀಟ್ ಯುಜಿ ಪರೀಕ್ಷೆ 2026 ರದ್ದು: ವಿದ್ಯಾರ್ಥಿಗಳ ಭವಿಷ್ಯ ಅತಂತ್ರ ಸಂಸದ ಜಿ. ಕುಮಾರ್ ನಾಯಕ ತೀವ್ರ ಆಕ್ರೋಶ

ನೈಜ್ಯ ದೇಸೆ ನ್ಯೂಸ್



**ರಾಯಚೂರು: NEET-UG 2026 ಪರೀಕ್ಷೆಯನ್ನು ರದ್ದುಪಡಿಸಿರುವುದು ದೇಶದ ಲಕ್ಷಾಂತರ ವಿದ್ಯಾರ್ಥಿಗಳ ಭವಿಷ್ಯದ ಬಗ್ಗೆ ಗಂಭೀರ ಆತಂಕವನ್ನು ಉಂಟುಮಾಡಿದೆ ಎಂದು ರಾಯಚೂರು ಲೋಕಸಭಾ ಕ್ಷೇತ್ರದ ಸಂಸದ ಜಿ. ಕುಮಾರ್ ನಾಯಕ ತಿಳಿಸಿದ್ದಾರೆ. ಈ ಕುರಿತು ಪತ್ರಿಕಾ ಪ್ರಕಟಣೆ ನೀಡಿರುವ ಅವರು, ಪರೀಕ್ಷೆ ರದ್ದುಪಡಿಸುವ ನಿರ್ಧಾರವು ವಿದ್ಯಾರ್ಥಿಗಳ ಆತ್ಮವಿಶ್ವಾಸ, ಮಾನಸಿಕ ಆರೋಗ್ಯ ಹಾಗೂ ಹಲವು ವರ್ಷಗಳ ಪರಿಶ್ರಮಕ್ಕೆ ದೊಡ್ಡ ಹೊಡೆತ ನೀಡಿದಂತಾಗಿದೆ ಎಂದು ಹೇಳಿದ್ದಾರೆ.**

/ಇದೇ ರೀತಿಯ ಪ್ರಶ್ನೆಪತ್ರಿಕೆ ಸೋ-ರಿಕೆ ವಿವಾದವು ಈಗಾಗಲೇ 2024ರಲ್ಲಿಯೇ ಎದುರಾಗಿದ್ದರೂ, CBI ತನಿಖೆ ನಡೆದ ನಂತರವೂ ಯಾವುದೇ ಜವಾಬ್ದಾರಿತನ ಅಥವಾ ವ್ಯವಸ್ಥಾತ್ಮಕ ಸುಧಾರಣೆ ನಡೆದಂತೆ ಕಾಣುತ್ತಿಲ್ಲ ಎಂದು ಅವರು ಆರೋಪಿಸಿದರು. ಬದಲಿಗೆ, ಲಕ್ಷಾಂತರ ವಿದ್ಯಾರ್ಥಿಗಳ ಭವಿಷ್ಯವನ್ನು ಅಪಾಯಕ್ಕೆ ತಳ್ಳಿದವರನ್ನೇ ಕೇಂದ್ರದ ಬಿಜೆಪಿ ಸರ್ಕಾರ ರಕ್ಷಿಸಿ, ಅವರಿಗೆ ಪದೋನ್ನತಿ ಮತ್ತು ಉನ್ನತ ಹುದ್ದೆಗಳನ್ನು ನೀಡಿರುವುದು ದುರಂತಕರ ಸಂಗತಿ ಎಂದು ಟೀಕಿಸಿದರು. ಅತ್ಯಂತ ಆಘಾತಕಾರಿ ವಿಷಯವೆಂದರೆ, ಪ್ರಶ್ನೆಪತ್ರಿಕೆ ಸೋರಿಕೆ ಆರೋಪವನ್ನು ಯಾವುದೇ ಸರ್ಕಾರಿ ಸಂಸ್ಥೆಗಳು ಪತ್ತೆಹಚ್ಚದೇ, ವಿದ್ಯಾರ್ಥಿಗಳೇ ಮೊದಲು ಈ ವಿಷಯವನ್ನು ಅಧಿಕಾರಿಗಳ ಗಮನಕ್ಕೆ ತಂದಿದ್ದಾರೆ ಎಂದು ಸಂಸದರು ತಿಳಿಸಿದ್ದಾರೆ.

ಮರುಮರು ನಡೆಯುತ್ತಿರುವ ಇಂತಹ ವೈಫಲ್ಯಗಳು ದೇಶದ ಪರೀಕ್ಷಾ ವ್ಯವಸ್ಥೆಯ ವಿಶ್ವಾಸಾರ್ಹತೆಯನ್ನು ಗಂಭೀರವಾಗಿ ಕುಂದಿಸುತ್ತಿದ್ದು, ಯುವ ಅಭ್ಯರ್ಥಿಗಳ ನಂಬಿಕೆಯನ್ನು ಹಾಳು ಮಾಡುತ್ತಿರುವುದು ವಿಷಾದನೀಯ ಸಂಗತಿ ಎಂದು ಅವರು ಹೇಳಿದರು. ಪರೀಕ್ಷಾ ವ್ಯವಸ್ಥೆಯಲ್ಲಿ ಪಾರದರ್ಶಕತೆ, ಜವಾಬ್ದಾರಿತನ ಮತ್ತು ಶಾಶ್ವತ ಸುಧಾರಣೆಗಳನ್ನು ತಕ್ಷಣ ಜಾರಿಗೆ ತರಬೇಕು ಎಂದು ಅವರು ಕೇಂದ್ರ ಸರ್ಕಾರವನ್ನು ಆಗ್ರಹಿಸಿದ್ದಾರೆ.

## ಅರಕೇರಾ ಆದರ್ಶ ವಿದ್ಯಾಲಯದಲ್ಲಿ ಪದವಿಪೂರ್ವ ಶಿಕ್ಷಣ ಆರಂಭ ಪ್ರವೇಶ ಪ್ರಾರಂಭ: ಬುದ್ಧಿವಂತಿ

ನೈಜ್ಯ ದೇಸೆ ನ್ಯೂಸ್

ಅರಕೇರಾ: ಪಟ್ಟಣದಲ್ಲಿನ ರಾಜ್ಯ ಸರಕಾರದ ಆದರ್ಶ ವಿದ್ಯಾಲಯದಲ್ಲಿ ಪ್ರಸಕ್ತ ಸಾಲಿನಿಂದ ಪದವಿಪೂರ್ವಕಾಲೇಜು ವಿಭಾಗ ಆರಂಭವಾಗಿದ್ದು ವಿದ್ಯಾರ್ಥಿಗಳ ದಾಖಲಾತಿ ಆರಂಭವಾಗಿದೆ ಎಂದು ಪ್ರಾಂಶುಪಾಲರಾದ ಬುದ್ಧಿವಂತಿಯವರು ತಿಳಿಸಿದ್ದಾರೆ. ಅರಕೇರಾ ಪಟ್ಟಣದಲ್ಲಿನ ಸರಕಾರಿ ಆದರ್ಶ ವಿದ್ಯಾಲಯದಲ್ಲಿ ಆದರ್ಶ ಸರಕಾರಿ ಪದವಿ ಪೂರ್ವ ಕಾಲೇಜು ಪ್ರಾರಂಭ.



2026-27 ನೇ ಶೈಕ್ಷಣಿಕ ಸಾಲಿನಲ್ಲಿ ಪ್ರಥಮ ಪಿಯು ವಿಜ್ಞಾನ ಮತ್ತು ವಾಣಿಜ್ಯ ವಿಭಾಗಕ್ಕೆ ಪ್ರವೇಶ ಆರಂಭವಾಗಿದೆ ಕಾಲೇಜಿನಲ್ಲಿ ವಿಜ್ಞಾನ ವಿಭಾಗದಲ್ಲಿ ಪಿಸಿಎಂಸಿಎಸ್ ವಾಣಿಜ್ಯ ವಿಭಾಗದಲ್ಲಿ ಇಬಿಎಸಿ-ಎಸ್ ಕೋರ್ಸ್ ಶೈಕ್ಷಣಿಕ ಸಾಲಿನಿಂದ ಆರಂಭವಾಗಿದೆ. ಸುಸಜ್ಜಿತ ಕಟ್ಟಡ,ವಿಜ್ಞಾನ ಪ್ರಯೋಗಾಲಯ,ಆಧುನಿಕ ಗ್ರಂಥ-ಾಲಯ, ಕಂಪ್ಯೂಟರ್ ಲ್ಯಾಬ್,ಯುಪಿಎಸ್, ಡಿಜಿಟಲ್ ಕ್ಲಾಸ್ ವ್ಯವಸ್ಥೆ ಒಳಗೊಂಡ ಸೌಲಭ್ಯಗಳಿವೆ ಪ್ರವೇಶ ಪ್ರಕ್ರಿಯೆ ಆರಂಭವಾಗಿದೆ. ಆಸಕ್ತರು ದೇವದುರ್ಗ ಮತ್ತು ಅರಕೇರಾ ಸುತ್ತಮುತ್ತಲಿನ ಗ್ರಾಮೀಣ ಭಾಗದ ವಿದ್ಯಾರ್ಥಿಗಳು ಕಾಲೇಜಿನಲ್ಲಿ ಪ್ರಥಮ ಪಿಯು ಪ್ರವೇಶ ಪಡೆಯಬಹುದು ಎಂದು ಅರಕೇರಾ ಆದರ್ಶ ಸರಕಾರಿ ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯರಾದ ಬುದ್ದಿವಂತಿ ಪ್ರಕಟಣೆಯಲ್ಲಿ ಕೊರಿದ್ದಾರೆ.'

## ಎಸ್ ಎಸ್ ಎಲ್ ಸಿ, ಪಿಯುಸಿ ಯಲ್ಲಿ ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಅಭಿನಂದನೆ

ನೈಜ್ಯ ದೇಸೆ ನ್ಯೂಸ್

**ಮಸ್ಕಿ: ತಾಲ್ಲೂಕಿನ ಹಾಲಾಪೂರದ ಅರವಿಂದ ಘೊಷ ಶಾಲೆಯಲ್ಲಿ ಒಂದ ರಿಂದ ಏಳನೇ ತರಗತಿವರಗೆ ಅಭ್ಯಾಸ ಮಾಡಿ,ಮುಂದೆ ಎಸ್ ಎಸ್ ಎಲ್ ಸಿ ಯಲ್ಲಿ ಅತಿ ಹೆಚ್ಚು ಅಂಕ ಪಡೆದ ಭವಾನಿ ತಂದೆ ಮೌನೇಶ ಬೆಸ್ಟ ಪಬ್ಲಿಕ್ ಶಾಲೆ ಹಾಲಾಪೂರ 96%,, ಆಕಾಶ ಸರಕಾರಿ ಪ್ರೌಢಶಾಲೆ ಹಾಲಾಪೂರ 89%,**

ಪೂರ್ವಿಕ ತಂದೆ ತಿಮ್ಮನಗೌಡ ಬೆಸ್ಟ್ ಪಬ್ಲಿಕ್ ಶಾಲೆ ಹಾಲಾಪೂರ 86% , ಹಾಗೆ ದ್ವಿತೀಯ ಪಿಯುಸಿ ವಿಜ್ಞಾನ ದಲ್ಲಿ ಸಿಂಚನ ತಂದೆ ಚಂದ್ರಶೇಖರಗೌಡ ಚೈತನ್ಯ ಟೆಕ್ನೊ ಕಾಲೇಜ ಬಳ್ಳಾರಿ 95% ಗಳಿಸಿ ಉತ್ತಮ ಸಾಧನೆ ಮಾಡಿದ್ದಕ್ಕಾಗಿ ಶಾಲೆಯ ಅದ್ಯಕ್ಷ ಮರಿಗೌಡ ಮಾ.ಪಾ ನಮ್ಮ ಶಾಲೆಯಲ್ಲಿ ಅಭ್ಯಾಸ ಮಾಡಿ



ಇಂದು ಬೇರೆಕಡೆ ಹೋಗಿ ಅತ್ಯುತ್ತಮ ಫಲಿತಾಂಶ ಪಡೆದು, ತಂದೆತಾಯಿ ಕಲಿಸಿದ ಶಿಕ್ಷಕರು ಶಾಲೆಗೆ, ಊರಿಗೆ ಕೀರ್ತಿ ಹೆಚ್ಚಿಸಿದ್ದಾರೆ,ಮುಂದೆ ಉನ್ನತವಾದ ಹುದ್ದೆ ಪಡೆದು ಸಮಾಜದಲ್ಲಿ ಆದ-ರ್ಶಪ್ರಾಯರಾಗಿ ಬಾಳಿರಿ ಎಂದು ಹೇಳಿದರು.ಈ ವೇಳೆಯಲ್ಲಿ ವಿನೊದ ಮಾ.ಪಾ,ಚನ್ನಬಸವ ಮಾ.ಪಾ,ಅಪೂರ್ವ, ವಂದನಾ ಇನ್ನಿತರರು ಇದ್ದರು.

## ವಂಡ್ಸೆಯಲ್ಲಿ ಕಾಂಗ್ರೆಸ್ ಕಟ್ಟಡ ನಿರ್ಮಾಣಕ್ಕೆ ಶಂಕುಸ್ಥಾಪನೆ

### ಸಂಘಟನೆ ಬಲವರ್ಧನೆಗೆ ರಾಜ್ಯಾದ್ಯಂತ ಕಟ್ಟಡ ನಿರ್ಮಾಣ ಯೋಜನೆ :ಸಚಿವ ಎನ್.ಎಸ್. ಬೋಸರಾಜು

ನೈಜ್ಯ ದೇಸೆ ನ್ಯೂಸ್

**ದಕ್ಷಿಣ ಕನ್ನಡ ಜಿಲ್ಲೆಯ ಪ್ರವಾಸದ ಅಂಗವಾಗಿ ಬೈಂದೂರು ತಾಲೂಕಿನ ವಂಡ್ಸೆಯಲ್ಲಿ ನಡೆದ ಸಮಾರಂಭದಲ್ಲಿ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಹಾಗೂ ವಿಧಾನ ಪರಿಷತ್ ಸಭಾ ನಾಯಕರಾದ ಎನ್. ಎಸ್. ಬೋಸರಾಜು ಅವರು ವಂಡ್ಸೆ ಬ್ಲಾಕ್ ಕಾಂಗ್ರೆಸ್ ಕಟ್ಟಡ ನಿರ್ಮಾಣ ಕಾಮಗಾ-ರಿಗೆ ಶಂಕುಸ್ಥಾಪನೆ ನೆರವೇರಿಸಿದರು.**

ಕಾಂಗ್ರೆಸ್ ಅಧಿವೇಶನದ ಶತಮಾನೋತ್ಸವ ಹಿನ್ನೆಲೆಯಲ್ಲಿ, ಕೆಪಿಸಿಸಿ ಅಧ್ಯಕ್ಷರು ಹಾಗೂ ಉಪಮುಖ್ಯಮಂತ್ರಿಗಳಾದ ಡಿ. ಕೆ. ಶಿವಕುಮಾರ್ ಅವರ ಘೋಷಣೆಯಂತೆ ರಾಜ್ಯದಾದ್ಯಂತ ಪಕ್ಷದ ಸಂಘಟನೆ



ಬಲಪಡಿಸುವ ಉದ್ದೇಶದಿಂದ ಜಿಲ್ಲಾ ಹಾಗೂ ತಾಲೂಕು ಮಟ್ಟದಲ್ಲಿ ಕಾಂಗ್ರೆಸ್ ಸಂಘಟನೆ ವಿಸ್ತರಣೆ ಯೋಜನೆ ಕೈಗೆತ್ತಿಕೊಳ್ಳಲಾಗಿದೆ ಎಂದು ಸಚಿವರು ತಿಳಿಸಿದರು. ಈ ಸಂದರ್ಭದಲ್ಲಿ ಮಾಜಿ ಸಂಸದರು ಹಾಗೂ ಮಾಜಿ ಸಚಿವರಾದ ಜಯಪ್ರಕಾಶ್ ಹೆಗ್ಡೆ, ಕೆಪಿಸಿಸಿ ಕಾರ್ಯಾಧ್ಯಕ್ಷರು ಮತ್ತು ವಿಧಾನ ಪರಿಷತ್ ಸದಸ್ಯರಾದ ಮಂಜುನಾಥ ಭಂಡಾರಿ, ಸ್ಥಳೀಯ ಕಾಂಗ್ರೆಸ್ ಮುಖಂಡರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

## ಅಳತೆಗೆ ತಕ್ಕ ಕೆಲಸ, ಕೈಗೆ ಸಂಪೂರ್ಣ ಕೂಲಿ. ಮಾರಲದಿನ್ನಿ ಜಲಾಶಯದಲ್ಲಿ ರೋಜ್‌ಗಾರ್ ದಿನಾಚರಣೆ, ನರೇಗಾ ಕೂಲಿಕಾರರಿಗೆ ಇಒ ಅಮರೇಶ್ ಕರೆ

ನೈಜ್ಯ ದೇಸೆ ನ್ಯೂಸ್

**ಮಸ್ಕಿ: ತಾಲೂಕಿನ ಮಾರಲದಿನ್ನಿ ಜಲಾಶಯದ ಹೂಳು ಎತ್ತುವ ಕಾಮಗಾರಿ ಸ್ಥಳದಲ್ಲಿ ಬುಧವಾರ ರೋಜ್‌ಗಾರ್ ದಿನವನ್ನು ಅರ್ಥಪೂರ್ಣವಾಗಿ ಆಚ-ರಿಸಲಾಯಿತು. ನರೇಗಾ ಕಾಮಗಾರಿಯಲ್ಲಿ ತೊಡಗಿದ್ದ ಕೂಲಿಕಾರರನ್ನು ಉದ್ದೇಶಿಸಿ ಮಾತನಾಡಿದ ಮಸ್ಕಿ ತಾಪಂ ಕಾರ್ಯನಿರ್ವಾಹಕ ಅಧಿಕಾರಿಗಳಾದ ಅಮರೇಶ,ಕೂಲಿಕಾರರು ಅಳತೆಗೆ ಅನುಗುಣವಾಗಿ ಕೆಲಸ ನಿರ್ವಹಿಸಿದರೆ ಸಂಪೂರ್ಣ ಕೂಲಿ ಮೊತ್ತ ಪಡೆಯಲು ಸಾಧ್ಯವಾಗುತ್ತದೆ ಎಂದು ಸಲಹೆ ನೀಡಿದರು.**

ಬೇಸಿಗೆ ಹಿನ್ನೆಲೆಯಲ್ಲಿ ಕೃಷಿ ಚಟುವಟಿ-ಕೆಗಳು ಕಡಿಮೆಯಾಗಿರುವುದರಿಂದ ನರೇಗಾ ಕೆಲಸಗಳಿಗೆ ಹೆಚ್ಚಿನ ಬೇಡಿಕೆ ವ್ಯಕ್ತವಾಗುತ್ತಿದೆ. ಈ ಹಿನ್ನೆಲೆಯಲ್ಲಿ ಗರಿಷ್ಠ ಸಂಖ್ಯೆಯಲ್ಲಿ ಉದ್ಯೋಗ



ಕಲ್ಪಿಸಲಾಗುತ್ತಿದೆ ಎಂದು ತಿಳಿಸಿದರು. ಬರಲಿರುವ ಜೂನ್ ತಿಂಗಳಲ್ಲಿ ರೈತರು ಮತ್ತು ಕಾರ್ಮಿಕ ಕುಟುಂಬಗಳಿಗೆ ಶಾಲಾ-ಕಾಲೇಜು ಶುಲ್ಕ, ಬಿತ್ತನೆ ಬೀಜ, ರಸಗೊಬ್ಬರ ಖರೀದಿ ಹಾಗೂ ಕೃಷಿ ಚಟುವಟಿಕೆಗಳಿಗೆ ಈ ಕೂಲಿ ಹಣ ನೆರವಾಗಲಿದೆ ಎಂದರು.ಬಿಸಿಲಿನ ತಾಪಮಾನ ಹೆಚ್ಚುತ್ತಿರುವ ಕಾರಣ ಕೂಲಿಕಾರರು ಆರೋಗ್ಯದ ಕಡೆ ಹೆಚ್ಚಿನ ಗಮನ ಹರಿಸಬೇಕು. ಕಾಮಗಾರಿ ಸ್ಥಳದಲ್ಲಿ ಸರ್ಕಾರದ ನಿಯಮಾನುಸಾರ ನೆರಳು, ಕುಡಿಯುವ ನೀರು ಹಾಗೂ ಪ್ರಥಮ ಚಿಕಿತ್ಸೆ ಪೆಟ್ಟಿಗೆ ವ್ಯವಸ್ಥೆ ಮಾಡಲಾಗಿದೆ ಎಂದು ಹೇಳಿದರು.

ಜೊತೆಗೆ ಸರ್ಕಾರದ ಆದೇಶದಂತೆ NMMS ತಂತ್ರಾಂಶದಲ್ಲಿ ದಿನಕ್ಕೆ ಎರಡು ಬಾರಿ ಹಾಜರಾತಿ ದಾಖಲಿಸುವುದು ಕಡ್ಡಾಯವಾಗಿದೆ ಎಂದು ತಿಳಿಸಿದರು.ಈ ಸಂದರ್ಭದಲ್ಲಿ ಅಡವಿಬಾವಿ ಮಸ್ಕಿ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾ-ರಿಗಳಾದ ಸಂತೋಷ್, ತಾಂತ್ರಿಕ ಸಂಯೋಜ-ಕರಾದ ಸೈಮನ್ ರಿಚರ್ಡ್, ತಾಂತ್ರಿಕ ಸಹಾಯಕ ಅಭಿಯಂತರರಾದ ಆಜೀಂ ಪಾಷಾ ಹಾಗೂ ಜಾವೀದ್ ಪಾಷಾ, ತಾಪಂ ಐಇಸಿ ಸಂಂ-ಯೋಜಕರಾದ ಸತೀಶ್, ಬಿಎಫ್ಟಿ ದುರ್ಗೇಶ್, ಮೇಟಿಗಳು ಸೇರಿದಂತೆ ಹಲವರು ಉಪಸ್ಥಿತರಿದ್ದರು. ಇನ್ನೊಂದೆಡೆ

ಸಂತೆಕಲ್ಲೂರು ಗ್ರಾಮ ಪಂಚಾಯಿತಿಯ ಕೂಲಿಕಾರರು ಕೈಗೊಂಡಿದ್ದ ಮಾರಲದಿನ್ನಿ ಜಲಾಶಯದ ಹೂಳು ತೆಗೆಯುವ ಕಾಮಗಾರಿಯನ್ನು ಸಹಾಯಕ ನಿರ್ದೇಶಕರಾದ ಶಿವಾನಂದರಡ್ಡಿ ಪರಿಶೀಲಿಸಿದರು. ತಾಂತ್ರಿಕ ಸಹಾಯಕ ಅಭಿಯಂತರರಾದ ಅರುಣ್ ಕೆಲಸದ ಅಳತೆ ಪಡೆದರು. ಈ ವೇಳೆ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಾದ ನಾಗರಾಜ್, ಕಾರ್ಯದರ್ಶಿಗಳಾದ ಅಯ್ಯನಗೌಡ, ಗ್ರಾಮ ಕಾಯಕ ಮಿತ್ರರಾದ ನಿರ್ಮಲಾ ಹಾಗೂ ಮೇಟಿಗಳು ಹಾಜರಿದ್ದರು.

## ಸಾಹಿತ್ಯ ಸಿಂಚನ

ಕನ್ನಡ ನಾಡು

ಕಾವೇರಿ ತೀರದ ಈ ಮಣ್ಣು ಪುಣ್ಯದ ಮಣ್ಣು,
ಕನ್ನಡವೇ ಉಸಿರು, ಕನ್ನಡವೇ ಕಣ್ಣು
ಕನ್ನಡ ಎಂಬುದು ನಮ್ಮ ತಾಯಿಯಂತೆ ಒಂದು ಹೆಣ್ಣು

ಹಂಪಿಯ ಕಲ್ಲು ಕಲ್ಲು ಹೇಳುವ ಇತಿಹಾಸ,
ವಿಜಯನಗರದ ವೈಭವ, ನಮ್ಮ ಹೆಮ್ಮೆಯ ಶ್ವಾಸ

ಜೋಗದ ಜುಳುಜುಳು, ಗಗನಚುಕ್ಕಿಯ ಮಿಂಚು,
ಮಲೆನಾಡಿನ ಹಸಿರು, ಕರಾವಳಿಯ ತೆಂಚು
ಮಳೆಗಾಲದಲ್ಲಿ ಅತಿಯಾಗಿ ಗುಡುಗು ಮಿಂಚು

ಶರಣರ ವಚನ, ದಾಸರ ಪದ,
ಕುವೆಂಪು ಕಂಡ ರಸಋಷಿಗಳ ನಾಡಿದು
ದೇಶ–ವಿದೇಶಿಗರ ಕೋಶದಲ್ಲಿ ಪ್ರಕಟಿಸಿದ ಬೀಡಿದು

ಭಾಷೆಗಾಗಿ ಹೋರಾಡಿದ ವೀರರ ಬೀಡಿದು,
ನುಡಿಗೆ ಜೈ ಎಂದರೆ ಎದೆಯು ಹಿಗ್ಗಿ ಹಾಡು
ನಮ್ಮ ನಾಡಿನ ಬಗ್ಗೆ ಅನ್ಯದಾಗಿ ಮಾತನಾಡಿದರೆ ಅವರ
ಎದೆ ಬಿಗಿದುಬಿಡು

ಸಿರಿಗನ್ನಡಂ ಗೆಲ್ಗೆ, ಸಿರಿಗನ್ನಡಂ ಬಾಳ್ಗೆ
ಜೈ ಕರ್ನಾಟಕ ಮಾತೆ, ಜೈ ಕನ್ನಡಾಂಬೆ...

**ಎಸ್. ದುರಗಪ್ಪ. ಕುಷ್ಟಗಿ.**

# ಹೂಗಾರ' ಕನ್ನಡ ಚಲನಚಿತ್ರದ ಚಿತ್ರೀಕರಣ ಮುಕ್ತಾಯ

**ನೈಜ್ಯ ದೆಸೆ ನ್ಯೂಸ್**

**ಸಿದ್ಧನಕೊಳ್ಳ: ಕೀರ್ತನ ಮೂವ್ಹಿ ಮೇಕರ್ಸ್ ಹಾಗೂ ಕೆ ಆರ್ ಎಸ್ ಪ್ರೊಡಕ್ಷನ್ ಬೆಂಗಳೂರ ಇವರ 'ಹೂಗಾರ' ಉಪ ಶಿರ್ಷಿಕೆ 'ಕಂಬದಮಲ್ಲ' ಕನ್ನಡ ಚಲನಚಿತ್ರದ ಚಿತ್ರೀಕರಣ ಸಂಪೂರ್ಣ ಮುಕ್ತಾಯವಾಗಿದೆ. ಬಾಗಲಕೋಟ ಜಿಲ್ಲೆಯ ಇಲಕಲ್ ತಾಲೂಕಿನ ಸಿದ್ಧನಕೊಳ್ಳಮಠದಲ್ಲಿ ಡಾ.ಶಿವಕುಮಾರ ಶ್ರೀಗಳ ಸಾನಿಧ್ಯದಲ್ಲಿ ನಡೆದ ಸಮಾರಂಭದಲ್ಲಿ ಕುಂಬಳಕಾಯಿ ಒಡೆಯುವ ಮೂಲಕ ಚಿತ್ರೀಕರಣನ್ನು ಮುಕ್ತಾಯಗೊಳಿಸಲಾಯಿತು.**

ಸತತ 28 ದಿನಗಳ ಕಾಲ ಸಿದ್ದನಕೊಳ್ಳ ಮಠ ಹಾಗೂ ಸಿದ್ದನಕೊಳ್ಳ ಗ್ರಾಮದ ಸುತ್ತಮುತ್ತ ಪ್ರದೇಶದಲ್ಲಿ ಉರಿವ ಬಿಸಿಲನ್ನು ಲೆಕ್ಕಿಸದೆ ಚಿತ್ರತಂಡವು ಚಿತ್ತೀಕರಣ ನಡೆಸಿ, ಉತ್ತರ ಕರ್ನಾಟಕದ ಭಾಷೆಯ ಜೊತೆಗೆ ಉತ್ತರ ಕರ್ನಾಟಕದ ಕಲಾವಿದರಿಗೂ



ಅವಕಾಶವನ್ನು ನೀಡಲಾಗಿದೆ. ಶ್ರೀಮಠದ ಪೀಠಾಧಿಪತಿಗಳಾದ ಡಾ.ಶಿವಕುಮಾರ ಸ್ವಾಮೀಜಿ ಅವರು ಚಿತ್ರದ ಹಾಡಿನಲ್ಲಿ ಅಭಿನಯಿಸಿದ್ದು ಚಿತ್ರ ತಂಡಕ್ಕೆ ಆಶೀರ್ವದಿಸಿ ಸಂಪೂರ್ಣ ಬೆಂಬಲ ನೀಡಿದ್ದಾರೆ. ಜೊತೆಗೆ ಗ್ರಾಮಗಳ ಜನತೆ ಕೂಡ ಯಾವುದೊಂದು ಕೊರತೆಯಾಗದಂತೆ ಸಂಪೂರ್ಣ ಸಹಕಾರ ನೀಡಿ ಚಿತ್ರೀಕರಣಕ್ಕೆ ಅನುಕೂಲ ಒದಗಿಸಿ ಕೊಟ್ಟಿದ್ದಾರೆ ಅವರಿಗೆಲ್ಲ ಕೃತಜ್ಞನಾಗಿರುವೆ ಎಂದು ನಿರ್ದೇಶಕ ಲೋಕೇಶ್ ವಿದ್ಯಾಧರ್ ಹೇಳಿದರು.

ಚಿತ್ರದಲ್ಲಿ ನಾಯಕನಾಗಿ ಸಂತೋಷ್ ಪಾಟೀಲ್, ನಾಯಕಿಯಾಗಿ ಅಪೂರ್ವ, ಸುನಂದಾ ಕಲ್ಬುರ್ಗಿ, ಮಹಾಂತೇಶ ಹಳ್ಳೂರ, ಮಾಸ್ಟರ್ ತೇಜಸ್, ಕಾಮಿಡಿ ಕಿಲಾಡಿ ಖ್ಯಾತಿಯ ದಾನಪ್ಪ, ಮುತ್ತುರಾಜ್ ಬುದ್ನಿ, ಕಿಟ್ಟಿ ತಾಳಿಕೋಟೆ, ಮಂಜುಳಾ ಅರಸ್, ಭಾವನಾ ಶಿಂಧೆ, ಕುಮಾರಿ ಧನ್ಯ, ಕಿರಣ, ದಶರಥ, ವಿದ್ಯಾ ಗಂಜಿಹಾಳ ಮೊದಲಾದವರಿದ್ದಾರೆ. ತಾಂತ್ರಿಕ ವರ್ಗದಲ್ಲಿ ಛಾಯಾಗ್ರಹಣ ಜನಾರ್ಧನ್ ರಾಜು ,ಸುವೀಶ, ನೃತ್ಯ ನಾಗರಾಜ್, ಸಂಭಾಷಣೆ ಶಿವಂ ಬೆಂಗೇರಿ, ಸಾಹಿತ್ಯ ಲೋಕೇಶ್ ವಿದ್ಯಾಧರ್, ಶಿವರಾಜ್, ಕಿನ್ನಾಳ ರಾಜ್, ಸಂಗೀತ ರಿದಂ ಕುಟ್ಟಿ, ಪತ್ರಿಕಾ ಸಂಪರ್ಕ ಡಾ.ಪ್ರಭು ಗಂಜಿಹಾಳ, ಡಾ.ವೀರೇಶ ಹಂಡಿಗಿ ಅವರದಿದ್ದು, ಈಗಾಗಲೇ 'ಒಬ್ಬಟ್ಟು' ಚಿತ್ರ ನಿರ್ದೇಶಿಸಿದ್ದ ಲೋಕೇಶ್ ವಿದ್ಯಾಧರ್ ಕಥೆ–ಚಿತ್ರಕಥೆ–ನಿರ್ದೇಶನ ಮಾಡಿದ್ದಾರೆ.

ಇನ್ನು ಪೋಸ್ಟಪ್ರೊಡಕ್ಷನ್ ಕಾರ್ಯವನ್ನು ಈ ವಾರದಲ್ಲೇ ಆರಂಭಿಸಿ ಶೀಘ್ರ ಚಿತ್ರವನ್ನು ಬೆಳ್ಳಿತೆರೆಗೆ ತರಲಾಗುವದು, ಚಿತ್ರದ ಹಾಡುಗಳನ್ನು ಹುಬ್ಬಳ್ಳಿ, ಗದಗ, ಬಾಗಲಕೋಟೆ ಮತ್ತು ಬೆಂಗಳೂರಿನಲ್ಲಿ ಬಿಡುಗಡೆ ಮಾಡುವ ಆಲೋಚನೆ ಇದೆ. ಕೀರ್ತನ ಮೂವ್ಹಿ ಮೇಕರ್ಸ್ ಹಾಗೂ ಕೆ ಆರ್ ಎಸ್ ಪ್ರೊಡಕ್ಷನ್ ಅವರು ಚಿತ್ರದ ನಿರ್ಮಾಪಕರಾಗಿದ್ದಾರೆ ಎಂದು ನಿರ್ದೇಶಕ ಲೋಕೇಶ ತಿಳಿಸಿದ್ದಾರೆ.

–ಡಾ.ಪ್ರಭು ಗಂಜಿಹಾಳ

# ಮೌಲಾನ ರಾಜಹುಸೇನ್ ಅವರ.ಹಲ್ ಅಮನ್ ಹಜ್

## ಉಮ್ರ ಟೂರ್ ಅಂಡ್ ಟ್ರಾವೆಲ್ಸ್ ವತಿಯಿಂದ 12 ಜನ ಹಜ್ ಯಾತ್ರೆಗೆ ಪ್ರಯಾಣ




**ನೈಜ್ಯ ದೆಸೆ ನ್ಯೂಸ್**

**ಸಿಂಧನೂರ್: ಸಿಂಧನೂರಿನಲ್ಲಿ ಅಕ್ತರ ಪಾಷಾ ಗುತ್ತಿಗೆದಾರರು ಮತ್ತು ಅವರ ಸಹೋದರರಾದ ಮುಕ್ತಿಯರ್ ಮೇಸ್ತ್ರಿ ರವರು ತಮ್ಮ ಮನೆಯಲ್ಲಿ ಹಜ್ ಯಾತ್ರೆ ಕೈಗೊಂಡಂತಹ 12 ಜನರಿಗೆ ಸನ್ಮಾನವನ್ನು ಮಾಡುವುದರ ಮುಖಾಂತರ ಅವರನ್ನು ಶುಭ ಹಾರೈಸಿದರ. ಅಕ್ತರ್ ಪಾಷಾ.ಗುತ್ತಿಗೆದಾರರು. ಮಾತನಾಡಿ ಹಜ್ ಹೋಗುವರು ನಮಗಾಗಿ ನಮ್ಮ ಮನೆಯವರಿಗಾಗಿ ಪ್ರಾರ್ಥನೆಯನ್ನು ಮಾಡಬೇಕು ಎಂದು ಅವರಿಗೆ ಹೇಳಿದರು.**

ಅದೇ ರೀತಿ ಶಫಿವುಲ್ಲಾ ಖಾನ್ ಕೆಡಿಪಿ ಜಿಲ್ಲಾ ಸದಸ್ಯರು ರವರು ಮಾತನಾಡಿ. ಹಜ್ ಹೋಗುವಂತ ಎಲ್ಲಾ ಹಾಜಿಗಳಿಗೂ ಪ್ರಯಾಣ ಸುಖಕರವಾಗಿರಲಿ ಹಾಜಿಗಳ ಪ್ರಾಥ–ರ್ನೆಯನ್ನು ಅಲ್ಲಾಹನು ಅನುಗ್ರಹಿಸಲಿ . ಎಂದು ಅವರನ್ನು ಶುಭ ಹಾರೈಸಿದರು ಮತ್ತು ನಮಗಾಗಿ ಮತ್ತು.ಸಿಂಧನೂರಿನ ಎಲ್ಲಾ ಜನರಿಗಾಗಿ ಪ್ರಾಥ–ರ್ನೆಯನ್ನು ಮಾಡಬೇಕು ಎಂದು ಅವರಲ್ಲಿ ಕೇಳಿಕೊಂಡರು. ಜಾಫರ್ ಅಲಿ ಜಾಗೀರ್ದಾರ್ ರವರು ಮಾತನಾಡಿ ಸಿಂಧನೂರಿನ ಜನ–ರಿಗಾಗಿ ನಮ್ಮ ಕುಟುಂಬಸ್ಥರಿಗಾಗಿ ಹಾರೈಸಿ ದುವಾ ವನ್ನು ಮಾಡಿ ಎಂದು ಹೇಳಿದರು.

ಈ ಸಂದರ್ಭದಲ್ಲಿ ಹಜ್ ಕೈಗೊಂಡಂತಹ ಮಹೆಬೂಬ್ ಖಾನ್ ಸಾಬ್. ಗುಲಾಬ್ ಹುಸೇನ್ ಸಾಬ್ ಭಾಷಾ ಸಾಹಬ್ ಭಾಷಾ ಟೈಲ್ಸ್ ಮಾಲೀಕರು. ರಾಜಹುಸೇನ್ ಮೌಲಾನ. ಫಾರೂಕ್ ಸಾಬ್ ರೆಹಾನ್ ಖಾನ್. ಅನೇಕ ಹಾಜಿಗಳಿಗೆ ಸನ್ಮಾನಿಸಲಾಯಿತು. ಮತ್ತು ಊರಿನ ಹಿರಿಯರು ಜಾಫರ್ ಅಲಿ ಜಾಗೀರ್ದಾರ್ ಬಕ್ಷು ಜೆಡಿಎಸ್ ಮುಖಂಡರು ಖಾದಿರು ಮೇಸ್ತ್ರಿ ಶಾಹಿದ್ ಖಾನ್ ನಜೀರ್ ಇಂಜಿನಿಯರ್ ಖಾದರ್ ಮೇಸ್ತ್ರಿ ಮುಲ್ಲಾ ಸಾಬ್ ಕಿಲ ಸೈಯದ್ ಅತ್ತಾರ್ ಶಫಿವುಲ್ಲಾ ಖಾನ್ ಕೆಡಿಪಿ ಜಿಲ್ಲಾ ಸದಸ್ಯರು ಲಾಲ್ ಅಹಮದ್ ಮೇಸ್ತ್ರಿ ಅನೇಕ ಮುಖಂಡರು ಯುವಕರು ಭಾಗಿಯಾಗಿದ್ದರು

## ಜಮಾತ್ ಎ ಇಸ್ಲಾಮ್ ಹಿಂದ್ ಮಾಜಿ ಅಧ್ಯಕ್ಷ ಅಲ್ ಹಾಜ್ ಎಂಡಿ ಶರೀಪ್ ಜರತಾರಗರ್ ನಿಧನ.

**ನೈಜ್ಯ ದೆಸೆ ನ್ಯೂಸ್**

**ಮುದ್ದೇಬಿಹಾಳ: ಪಟ್ಟಣದ ವಿದ್ಯಾನಗರ ನಿವಾಸಿಯಾಗಿದ್ದ, ನಿವೃತ್ತ ಅಂಜುಮನ್ ಹೈಸ್ಕೂಲ್ ಮುಖ್ಯಗುರುಗಳು ಹಾಗೂ ಜಮಾತ್–ಎ–ಇಸ್ಲಾಮಿ ಹಿಂದ್ ಸಂಘಟನೆಯ ಮಾಜಿ ಅಧ್ಯಕ್ಷರಾಗಿದ್ದ ಅಲ್ ಹಾಜ್ ಮಹಮ್ಮದ್ ಶರೀಫ್ ದಾದೇಸಾಬ್ ಜರತಾರಗರ ವಯಸ್ಸು, 80 ಅವರು ಇಂದು ಬೆಳಗ್ಗೆ ಸುಮಾರು 9:30 ಗಂಟೆಗೆ ನಿಧನರಾದರು.**



ಅವರ ಅಗಲಿಕೆಯ ಸುದ್ದಿ ಪಟ್ಟಣದ ಶಿಕ್ಷಣ ಕ್ಷೇತ್ರ, ಧಾರ್ಮಿಕ ವಲಯ ಹಾಗೂ ಸಾಮಾಜಿಕ ಸಂಘಟನೆಗಳಲ್ಲಿ ದುಃಖದ ಛಾಯೆ ಮೂಡಿಸಿದೆ. ಮಹಮ್ಮದ್ ಶರೀಫ್ ಜರತಾರಗರ್ ಅವರು ಶಿಸ್ತು, ಸರಳತೆ, ಸೌಜನ್ಯ ಮತ್ತು ಮಾನವೀಯ ಮೌಲ್ಯಗಳಿಗೆ ಹೆಸರಾಗಿದ್ದ ಶಿಕ್ಷಕರಾಗಿದ್ದರು. ಹಲವು ದಶಕಗಳ ಕಾಲ ಅಂಜುಮನ್ ಹೈಸ್ಕೂಲ್‌ನಲ್ಲಿ ಮುಖ್ಯಗುರುಗಳಾಗಿ ಸೇವೆ ಸಲ್ಲಿಸಿದ ಅವರು ಸಾವಿರಾರು ವಿದ್ಯಾರ್ಥಿಗಳ ಬದುಕಿಗೆ ಮಾರ್ಗದರ್ಶಕರಾಗಿದ್ದರು. ಶಿಕ್ಷಣದ ಜೊತೆಗೆ ನೈತಿಕತೆ, ಸಂಸ್ಕಾರ ಹಾಗೂ ಸಾಮಾಜಿಕ ಜವಾಬ್ದಾ–ರಿಗಳ ಮಹತ್ವವನ್ನು ವಿದ್ಯಾರ್ಥಿಗಳಿಗೆ ಬೋಧಿಸುವ ಮೂಲಕ ಆದರ್ಶ ಶಿಕ್ಷಕರಾಗಿ ಹೆಸರು ಗಳಿಸಿದ್ದರು. ಅವರು ಧಾರ್ಮಿಕ ಹಾಗೂ ಸಾಮಾಜಿಕ ಕ್ಷೇತ್ರಗಳಲ್ಲಿಯೂ ಸಕ್ರಿಯ ಪಾತ್ರವಹಿಸಿದ್ದರು. ಜಮಾತ್–ಎ–ಇಸ್ಲಾಮಿ ಹಿಂದ್ ಸಂಘಟನೆಯ ಮೂಲಕ ಸಮಾಜದಲ್ಲಿ ಸೌಹಾರ್ದತೆ, ಶಾಂತಿ, ಸಹಬಾಳ್ವೆ ಮತ್ತು ಸೇವಾ ಮನೋಭಾವ ಬೆಳೆಸುವ ಕಾರ್ಯಗಳಲ್ಲಿ ತೊಡಗಿಸಿಕೊಂಡಿದ್ದರು. ಬಡವರು, ನಿರ್ಗತಿಕರು ಹಾಗೂ ವಿದ್ಯಾರ್ಥಿಗಳ ನೆರವಿಗೆ ಸದಾ ಮುಂದಾಗುತ್ತಿದ್ದ ಅವರು ಸಮಾಜದ ಎಲ್ಲಾ ವರ್ಗದ ಜನರ ಪ್ರೀತಿ ಮತ್ತು ಗೌರವಕ್ಕೆ ಪಾತ್ರರಾಗಿದ್ದರು. ಅವರ ನಿಧನದಿಂದ ಕುಟುಂಬಕ್ಕೆ ಮಾತ್ರವಲ್ಲದೆ ಮುದ್ದೇಬಿಹಾಳ ಪಟ್ಟಣದ ಶೈಕ್ಷಣಿಕ, ಧಾರ್ಮಿಕ ಹಾಗೂ ಸಾಮಾಜಿಕ ವಲಯಕ್ಕೂ ತುಂಬಲಾರದ ನಷ್ಟ ಉಂಟಾಗಿದೆ ಎಂದು ಅನೇಕ ಗಣ್ಯರು ಸಂತಾಪ ಸೂಚಿಸಿದ್ದಾರೆ. ಮೃತರು ಪತ್ನಿ, ಪುತ್ರರು, ಪುತ್ರಿಯರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಮೃತರ ನಿವಾಸಕ್ಕೆ ವಿವಿಧ ಧಾರ್ಮಿಕ ಮುಖಂಡರು, ಶಿಕ್ಷಣ ಕ್ಷೇತ್ರದ ಗಣ್ಯರು, ರಾಜಕೀಯ ನಾಯಕರು, ಸಮಾಜಸೇವಕರು, ಹಳೆಯ ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಭೇಟಿ ನೀಡಿ ಅಂತಿಮ ದರ್ಶನ ಪಡೆದರು. ಬುಧವಾರ ಸಂಜೆ ತಾಳಿಕೋಟಿ ರಸ್ತೆಯ ಈದ್ಗಾ ಮೈದಾನದ ಸಮೀಪದ ಖಬರಸ್ಥಾನದಲ್ಲಿ ಅಂತ್ಯಕ್ರಿಯೆ ನೆರವೇ–ರಿಸಲಾಯಿತು. ಅವರ ನಿಧನಕ್ಕೆ ರಾಜಕೀಯ ಮುಖಂಡರು, ಧಾರ್ಮಿಕ ನಾಯಕರು, ಶಿಕ್ಷಣ ಕ್ಷೇತ್ರದ ಗಣ್ಯರು ಹಾಗೂ ಅಪಾರ ಶಿಷ್ಯಬಳಗ ತೀವ್ರ ಸಂತಾಪ ವ್ಯಕ್ತಪಡಿಸಿದ್ದು, "ಶರೀಫ್ ಸಾಹೇಬರು ಸರಳತೆ ಮತ್ತು ಸೇವೆಯ ಪ್ರತಿರೂಪವಾಗಿದ್ದರು. ಅವರ ಜೀವನ ಸಮಾಜಕ್ಕೆ ಮಾದರಿಯಾಗಿದೆ" ಎಂದು ಸ್ಮರಿಸಿದ್ದಾರೆ.

# ಮುಳ್ಳೂರು ಗ್ರಾಮದಲ್ಲಿ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ

## 90 ಲಕ್ಷ ಅನುದಾನದ ಸಿಸಿ ರಸ್ತೆ ಹಾಗೂ ಸಮುದಾಯ ಭವನ ನಿರ್ಮಾಣಕ್ಕೆ ಭೂಮಿ ಪೂಜೆ

**ನೈಜ್ಯ ದೆಸೆ ನ್ಯೂಸ್**

**ಸಿಂಧನೂರು: ವಿಧಾನಸಭಾ ಕ್ಷೇತ್ರದ ಜನಪ್ರಿಯ ಶಾಸಕರಾದ ಹಂಪನಗೌಡ ಬಾದರ್ಲಿ ಅವರ ಅನುದಾನದಲ್ಲಿ ಕ್ಷೇತ್ರದ ಸಮಗ್ರ ಅಭಿವೃದ್ಧಿಗೆ ಮತ್ತೊಂದು ಮಹತ್ವದ ಹೆಜ್ಜೆ ಇಡಲಾಗಿದೆ. ಕ್ಷೇತ್ರದ ಮುಳ್ಳೂರು ಗ್ರಾಮದಲ್ಲಿ 60 ಲಕ್ಷ ವೆಚ್ಚದ ಸಿಸಿ ರಸ್ತೆ ನಿರ್ಮಾಣ ಹಾಗೂ 30 ಲಕ್ಷ ವೆಚ್ಚದ ಶ್ರೀ ಈಶ್ವರ ದೇವಸ್ಥಾನದ ಸಮುದಾಯ ಭವನ ನಿರ್ಮಾಣ ಕಾಮಗಾರಿಗಳಿಗೆ ಭೂಮಿ ಪೂಜೆ ಕಾರ್ಯಕ್ರಮ ನೆರವೇರಿಸಲಾಯಿತು.**



ಕಾರ್ಯಕ್ರಮವನ್ನು ಸಿಂಧನೂರು ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಬಾಬುಗೌಡ ಬಾದರ್ಲಿ ಅವರು ವಿಧಿವಿಧಾನಗಳೊಂದಿಗೆ ನೆರವೇರಿಸಿ ಕಾಮಗಾರಿಗಳಿಗೆ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಮಾತನಾಡಿದ ಅವರು, ಗ್ರಾಮೀಣ ಪ್ರದೇಶಗಳ ಅಭಿವೃದ್ಧಿಗೆ ರಸ್ತೆ, ಕುಡಿಯುವ ನೀರು, ಸಮುದಾಯ ಭವನ ಸೇರಿದಂತೆ ಮೂಲಸೌಕರ್ಯಗಳ ಅಭಿವೃದ್ಧಿ ಅಗತ್ಯವಾಗಿದ್ದು, ಶಾಸಕರ ಮಾರ್ಗದರ್ಶನದಲ್ಲಿ ಕ್ಷೇತ್ರದ ಪ್ರತಿಯೊಂದು ಗ್ರಾಮಕ್ಕೂ ಅಭಿವೃದ್ಧಿ ತಲುಪಿಸುವ ಕೆಲಸ ನಿರಂತರವಾಗಿ ನಡೆಯುತ್ತಿದೆ ಎಂದು ತಿಳಿಸಿದರು.

ಸಿಸಿ ರಸ್ತೆ ನಿರ್ಮಾಣದಿಂದ ಗ್ರಾಮದಲ್ಲಿ ಸಂಚಾರ ವ್ಯವಸ್ಥೆ ಸುಧಾರಣೆಯಾಗುವುದರ ಜೊತೆಗೆ ಮಳೆಗಾಲದಲ್ಲಿ ಜನರು ಎದುರಿಸುತ್ತಿದ್ದ ಸಮಸ್ಯೆಗಳಿಗೆ ಪರಿಹಾರ ದೊರೆಯಲಿದೆ. ಅಲ್ಲದೇ ಶ್ರೀ ಈಶ್ವರ ದೇವಸ್ಥಾನದ ಸಮುದಾಯ ಭವನ ನಿರ್ಮಾಣದಿಂದ ಧಾರ್ಮಿಕ ಹಾಗೂ ಸಾಮಾಜಿಕ ಕಾರ್ಯಕ್ರಮಗಳಿಗೆ ಅನುಕೂಲವಾಗಲಿದೆ ಎಂದು ಗ್ರಾಮಸ್ಥರು ಅಭಿಪ್ರಾಯಪಟ್ಟರು. ಕಾರ್ಯಕ್ರಮದಲ್ಲಿ ಗ್ರಾಮ ಪಂಚಾಯತ್ ಸದಸ್ಯರು, ಮುಖಂಡರು, ಕಾರ್ಯಕರ್ತರು, ಗ್ರಾಮಸ್ಥರು ಹಾಗೂ ವಿವಿಧ ಸಂಘಟನೆಗಳ

# ವಿಜ್ರಂಭಣೆಯಿಂದ ಜರುಗಿದ ಶ್ರೀದೇವಿಯ ಭವ್ಯ ರಥೋತ್ಸವ

**ನೈಜ್ಯ ದೆಸೆ ನ್ಯೂಸ್**

**ತಾಳಿಕೋಟಿ: ಪಟ್ಟಣದ ಭೋವಿ ವಡ್ಡರ ಸಮಾಜದ ಆರಾಧ್ಯೆ ದೇವತೆಗಳಾದ ಶ್ರೀ ಹುಲಿಗೆಮ್ಮ ದೇವಿ ಮತ್ತು ಶ್ರೀ ಗದ್ಯಮ್ಮದೇವಿ ಇವರ ಜಾತ್ರಾ ಮಹೋತ್ಸವದ ಅಂಗವಾಗಿ ಮಂಗಳವಾರ ಮೂರ್ತಿಗಳ ಭವ್ಯ ಮೆರವಣಿಗೆ ಅದ್ದೂರಿಯಾಗಿ ಜರುಗಿತು. ಮುಂಜಾನೆ 11:00 ಘಂಟೆಗೆ ಪಟ್ಟಣದ ಶ್ರೀ ಅಂಬಾ ಭವಾನಿ ದೇವಸ್ಥಾನದಿಂದ ಸಕಲ ವಾದ್ಯ ಮೇಳಗಳೊಂದಿಗೆ ಆರಂಭವಾದ ಮೆರವಣಿಗೆಯು ಕತ್ರಿ ಬಜಾರ, ರಾಜವಾಡೆ, ಪಂಚ ಶಹೀದ ದರ್ಗಾ ಮಾರ್ಗವಾಗಿ ಭೋವಿ ವಡ್ಡರ ನಗರದಲ್ಲಿರುವ ದೇವಸ್ಥಾನದ ಗರ್ಭಗುಡಿ ಪ್ರವೇಶಿಸಿದಳು.**

ಮೆರವಣಿಗೆಯಲ್ಲಿ ಭೋವಿ ವಡ್ಡರ ಸಮಾಜದ ಅಧ್ಯಕ್ಷ ಹಣಮಂತ ಕಟ್ಟಿಮನಿ,



ಶ್ರೀ ಸಿದ್ದರಾಮೇಶ್ವರ ಭೋವಿ ವಡ್ಡರ ಸಮಾಜ ಕ್ಷೇಮಾಭಿವೃದ್ಧಿ ಸಂಘದ ಗೌರವ ಅಧ್ಯಕ್ಷ ದ್ಯಾವಪ್ಪ ಕೂಚಬಾಳ,ಅಧ್ಯಕ್ಷ ಶ್ರೀನಿವಾಸ ಕುಲಕರ್ಣಿ, ಉಪಾಧ್ಯಕ್ಷ ಶ್ರೀಕಾಂತ ಚಿಂಚೋಳಿ, ಕಾರ್ಯದರ್ಶಿ ಪ್ರಕಾಶ ಕೂಚಬಾಳ, ಪ್ರಧಾನ ಕಾರ್ಯದರ್ಶಿ ಭೀಮಸಿ ಕಾರಕೂರ, ಸಂಚಾಲಕ ಶಿವರಾಜ್ ಬಳವಾಟ, ಸಂಘಟನಾ ಕಾರ್ಯದರ್ಶಿ ದ್ಯಾವಪ್ಪ ಕಟ್ಟಿಮನಿ ಖಜಾಂಚಿ ನಾಗರಾಜ್ ಹಾದಿಮನಿ, ಪ್ರಮುಖರಾದ ನಾಗಪ್ಪ ಬಳವಾಟ, ದುರ್ಗಪ್ಪ ಕುಲಕರ್ಣಿ, ಹುಲಿಗೆಪ್ಪ ಕಟ್ಟಿಮನಿ, ದೇವಪ್ಪ ಕಟ್ಟಿಮನಿ, ದವಲಪ್ಪ ಕಟ್ಟಿಮನಿ, ನಿವೃತ್ತ ಶಿಕ್ಷಕ ಎಚ್.ಎನ್.ಕಟ್ಟಿಮನಿ, ಶಿಕ್ಷಕ ಆನಂದ ಡಿ ಕಟ್ಟಿಮನಿ, ತಿಮ್ಮಣ್ಣ ಹಗಟಗಿ,

ಭೀಮಪ್ಪ ನಾಲತವಾಡ, ಸಾಯಬಣ್ಣ ಢವಳಗಿ, ದುರ್ಗಪ್ಪ ಕರಕೂರ, ದುರ್ಗಪ್ಪ ಹಾದಿಮನಿ, ಯಮನಪ್ಪ ಕೂಚಬಾಳ, ಹನುಮಂತ ಬಂಡಿವಡ್ಡರ, ಬಸಪ್ಪ ಡವಳಗಿ ಬಸವರಾಜ ಕಟ್ಟಿಮನಿ, ಭೀಮಸಿ ಹಗಟಗಿ, ಮಾಶಪ್ಪ ಕಾರಕೂರ,ಬಸವರಾಜ ಕಟ್ಟಿಮನಿ, ಕಾಶಿನಾಥ ಕಟ್ಟಿಮನಿ, ರಾಜು ಹಗಟಗಿ ಹಾಗೂ ಅಪಾರ ಸಂಖ್ಯೆಯಲ್ಲಿ ಮಹಿಳೆಯರು ಇದ್ದರು.

# ಗುಡಿಹಾಳ ಗ್ರಾಮದಲ್ಲಿ ಎರಡು ಹೊಸ ಶಾಸನಗಳು ಪತ್ತೆ.

**ನೈಜ್ಯ ದೆಸೆ ನ್ಯೂಸ್**

**ಮಸ್ಕಿ: ತಾಲ್ಲೂಕಿನ ಗುಡಿಹಾಳ ಗ್ರಾಮದಲ್ಲಿ ಪುರಾತನ ರಾಮಲಿಂಗೇಶ್ವರ,ಬೀರೇಶ್ವರ,ದ್ಯಾನಮ್ಮ,ಕೆಂಚಮ್ಮ, ಸುಂಕ್ಲಮ್ಮ, ವೀರಾಂಜನೇಯ, ಸೇ–ರಿದಂತೆ ಅನೇಕ ದೇವಸ್ಥಾನಗಳಿದ್ದು ಅಗಸೆ ಬಾಗಿಲು ಹುಡೇವು (ಕಾವಲು ಕಮಾನು ಕಟ್ಟಡ) ಮಸೀದಿ ಗಳು ವೀರಮಹಾ ಸತಿ ಶಿಲ್ಪ, ಸಪ್ತಮಾತೃಕೆಯರು,ನಾಗರ ಶಿಲ್ಪಗಳು ಮೊದಲಾದವು ಕಾಣಬರುತ್ತವೆ.**

ಇಲ್ಲಿನ ರಾಮಲಿಂಗೇಶ್ವರ ದೇವಾಲಯವು ಅನೇಕ ವರ್ಷಗಳವರೆಗೆ ಹಾಳು ಮಣ್ಣಿನಲ್ಲಿ ಹೊತು ಹೋಗಿತ್ತಂತೆ. ಹಿಂದೆ ಈ ದೇವಾಲಯವು ಮೂರ್ತಿ ಬಂಜಕರ ದಾಳಿಗೆ ತುತ್ತಾಗಬಾರದೆಂದು ಅಂದಿನ ಊರಿನ ಗ್ರಾಮಸ್ಥರು ಸೇರಿ ಇದನ್ನು ಮಣ್ಣಿನಲ್ಲಿ ಹೊತಿಟ್ಟದ್ದರಂತೆ. ನಂತರ ಇದು ಹಲವು ವರ್ಷಗಳ ಕಾಲ ಜನರಿಗೆ ತಿಳಿಯದೆ ಅಗೋಚರವಾಗಿತ್ತಂತೆ. ಕ್ರಿ.ಶ.1961 ರಲ್ಲಿ ಈ ದೇವಾಲಯದ ಜಾಗದಲ್ಲಿ ಆಡುಗಳನ್ನು (ಮೇಕೆ) ಸ್ಥಳೀಯರು ನಿಲ್ಲಿಸುತ್ತಿದ್ದರಂತೆ. ಅವುಗಳು ಸುಮ್ಮನೆ ಇರದೆ ತಮ್ಮ ಕಾಲುಗಳಿಂದ ನೆಲವನ್ನು ಕೆದರುತ್ತಿರುವಾಗ ದೇವಾಲಯದ ಅವಶೇಷವು ಕಂಡುಬಂದ ಕಾರಣ ಗ್ರಾಮಸ್ಥರು ಮಣ್ಣನ್ನು ತೆಗೆದು ಕೆಲಭಾಗ ಜೀರ್ಣೋದ್ಧಾರ ಮಾಡಿ ಈ ದೇವರ ಪೂಜೆ ಪುನಸ್ಕಾರಗಳು ಸಾಂಗವಾಗಿ ನಡೆಯಲು ಕಾರಣರಾಗಿದ್ದಾರೆ.

ಹಾಗೆಯೇ ಇಲ್ಲಿನ ಗ್ರಾಮಸ್ಥರು ಹೇಳುವ ಪ್ರಕಾರ ಈ ಊರಿಗೆ ಮೊದಲು ದೇವಪುರ ಎಂಬ ಹೆಸರಿನಿಂದ ಕರೆಯುತ್ತಿದ್ದರೆಂದು ಅದು ನಂತರ ಹೆಸರು ಬದಲಾಯಿಸಿ ಕೊಂಡು ಗುಡಿಹಾಳ ಎಂದು ನಾಮಕರಣ ಮಾಡಿಕೊಂಡ ಬಗ್ಗೆ ಸ್ಥಳೀಯರು ತಿಳಿಸುತ್ತಾರೆ. ಈ ಗ್ರಾಮದ ಉತ್ತರ ದಿಕ್ಕಿಗೆ ಬರುವ ಸರ್ವೇ ನಂಬರ್ (50/1) ದಲ್ಲಿನ ಶ್ರೀಮತಿ ಚಂದ್ರಮ್ಮ ಗಂಡ ಕಲ್ಲಪ್ಪ ಕಂದಗಲ ಹುನುಕುಂಟಿಯವರ



ಹೊಲದಲ್ಲಿ ಕಪ್ಪು ಶಿಲೆ ಶಾಸನವು ಪತ್ತೆಯಾಗಿದೆ. ಇದು ನಂದಿ ವಿಗ್ರಹದ ಪಾದಪೀಠ ದಲ್ಲಿದ್ದು ಶಕ ವರ್ಷ 1073 ರ ಚೈತ್ರ ಶುದ್ಧ 1॥ಖರ॥51 ಎಂದಿದ್ದು ಇದು ಕಿ.ಶ.1151ರ ಕಾಲಘಟ್ಟಕ್ಕೆ ಸೇರುತ್ತದೆ.

ಹಾಗೆಯೇ ಎರಡನೇ ಶಾಸನವು ಗ್ರಾಮದ ಈಶಾನ್ಯ ದಿಕ್ಕಿಗೆ ಇರುವ ಸರ್ವೆ ನಂಬರ್.34/4 ರಲ್ಲಿ ಇರುವ ಶ್ರೀ ಪ್ರಶಾಂತ ತಂದೆ ಶಂಕ್ರಪ್ಪ ರವರ ಹೊಲದಲ್ಲಿನ ಕಣ ಶಿಲೆಯ ಶಾಸನ ವಾಗಿದೆ.ಇದರ ಮೇಲ್ಭಾಗದಲ್ಲಿ ಸೂರ್ಯ ನಿಂತ ಭಂಗಿಯ ವ್ಯಕ್ತಿಯ ತನ್ನ ಎಡಗೈಯಿಂದ ಬಿಲ್ಲನ್ನು ಭಾಗಿಸಿ ಬಲಗೈಯಿಂದ ಬಾಣವನ್ನು ಬಿಡುತ್ತಿರುವ ಸನ್ನಿವೇಶ, ಚಂದ್ರ ಶಿಲ್ಪಗಳಿವೆ.ಇದು ಕನ್ನಡ ಭಾಷೆ ಕನ್ನಡ ಲಿಪಿಯಲ್ಲಿದೆ ಇದರ ಎತ್ತರ ಮೂರುವರೆ ಅಡಿ,ಅಗಲ ಒಂದುವರೆ ಅಡಿ ಇದೆ.ಈ ಶಾಸನದ ಲಿಪಿಶೈಲಿಯ ದೃಷ್ಟಿಯಿಂದ ಇದು ಕ್ರಿ.ಶ.15 –16ನೇ ಶತಮಾನಕ್ಕೆ ಸೇರುತ್ತದೆ. ಇದರಲ್ಲಿ ಹರಿಯೋ ಗತಿ ಎಂದು ಸ್ತುತಿಸುತ್ತಿದ್ದು ವ್ಯಯ ಸಂವತ್ಸರದ ರಾಳಾವಾರಎಂಬ ಊರಿನ ಮುದ್ದೈಯ್ಯ ಎಂಬಾಂತನ್ನು, ಯಾವುದೋ ಹೋರಾಟದಲ್ಲಿ ಮಡಿದ ಕಾರಣ ಆತನ ವಂಶಸ್ಥ–ರಿಗೆ ಬಮ್ಮನಾಯಕ ನೆಂಬಾತನು ಹೊಲವನ್ನು ದತ್ತಿ ಕೊಟ್ಟು ಅದಕ್ಕೆ ಅಂನು ಎಂಬ ತೆರಿಗೆಯಿಂದ ವಿನಾಯಿತಿ ನೀಡಿದ ಬಗ್ಗೆ ದಾಖಲಿಸುತ್ತದೆ.

ಎಂದು ಇತಿಹಾಸ ಸಂಶೋಧಕರಾದ ಡಾ.ಚನ್ನಬಸಪ್ಪ ಮಲ್ಕಂದಿನ್ನಿ ರವರು ಪ್ರಕಟಣೆಯ ಮೂಲಕ ತಿಳಿಸಿದರು. ಅದೇ ರೀತಿ ಈ ಶಾಸನವನ್ನು ಪತ್ತೆಹಚ್ಚಲು ಮಮ್ಮದ್ ರಫಿ ಲಿಂಗಸಗೂರು,ರವರ ಕಾರಣರಾಗಿದ್ದು, ಹಾಗೂ ಈ ಕ್ಷೇತ್ರ ಕಾರ್ಯದಲ್ಲಿ ಶಿವಕುಮಾರ ಪಾಟೀಲ, ಇರ್ಫಾನ್ ಬಂದೇನವಾಜ, ನೂರ್ ಬೇಗ್ ಉಸ್ತಾದ್, ನಾಗರಾಜ, ಸೇರಿದಂತೆ ಊರಿನ ಸ್ಥಳೀಯ ಇತಿಹಾಸ ಪ್ರಿಯರು ಇದ್ದರೂ.

## ನೇಮಕಾತಿ ಪ್ರಕಟಣೆ

DRDO DEBEL ನೇಮಕಾತಿ 2026: 8 ಪಾವತಿಸಿದ ಇಂಟರ್ನ್‌ಶಿಪ್ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. DRDO ಡಿಫೆನ್ಸ್ ಬಯೋ–ಎಂಜಿನಿಯರಿಂಗ್ ಮತ್ತು ಎಲೆಕ್ಟ್ರೋಮೆಡಿಕಲ್ ಲ್ಯಾಬೊರೇಟರಿ ಮೇ 2026 ರ DRDO DEBEL ಅಧಿಕೃತ ಅಧಿಸೂಚನೆಯ ಮೂಲಕ ಪಾವತಿಸಿದ ಇಂಟರ್ನ್‌ಶಿಪ್ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಬೆಂಗಳೂರು ಕರ್ನಾಟಕ ಸರ್ಕಾರದಲ್ಲಿ ವೃತ್ತಿಜೀವನವನ್ನು ಹುಡುಕುತ್ತಿರುವ ಉದ್ಯೋಗಾಕಾಂಕ್ಷಿಗಳು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 31–ಮೇ–2026 ರಂದು ಅಥವಾ ಮೊದಲು ಆಫ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು.ಆಫ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ: 12–05–2026 ಆಫ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 31–ಮೇ–2026 ಇಂಟರ್ನ್‌ಶಿಪ್ ತರಬೇತಿಗೆ ಪ್ರಾರಂಭ ದಿನಾಂಕ (ತಾತ್ಕಾಲಿಕ): 01 ಜುಲೈ 2026 ಅಧಿಕೃತ ವೆಬ್‌ಸೈಟ್: drdo.gov.in

1ನೇ ಪುಟದಿಂದ....

ಕಾಮರಾಜ್ ಅವರು ಸರ್ಕಾರದ ಪರವಾಗಿ ಮತ ಚಲಾಯಿಸಿದವರಲ್ಲಿ ಸೇರಿದ್ದಾರೆ. ಒಂದೇ ಮತದ ಅಂತರದಿಂದ ಗೆದ್ದ ಒಬ್ಬ ಶಾಸಕನನ್ನು ಹೊರತುಪಡಿಸಿ ಮತ್ತು ಇಂದು ವಿಶ್ವಾಸ ಮತಯಾಚನೆಯಲ್ಲಿ ಭಾಗವಹಿಸದಂತೆ ಮದ್ರಾಸ್ ಹೈಕೋರ್ಟ್ ಅವರನ್ನು ನಿರ್ಬಂಧಿಸಿತ್ತು. 234 ಶಾಸಕರನ್ನು ಹೊಂದಿರುವ ವಿಧಾನಸಭೆಯಲ್ಲಿ ಬಹುಮತಕ್ಕೆ 118 ಶಾಸಕರ ಅಗತ್ಯವಿದೆ. ವಿಜಯ್ ತಿರುಚಿ ಪಶ್ಚಿಮ ಮತ್ತು ಪೆರಂಬೂರು ಕ್ಷೇತ್ರದಿಂದ ಸ್ಪರ್ಧೆ ಮಾಡಿದ ಹಿನ್ನೆಲೆ ಅದನ್ನು ಒಂದು ಎಂದು ಪರಿಗಣಿಸಲಾಗುತ್ತದೆ. ಇದರ ಜೊತೆಗೆ ತಿರುಪತ್ತೂರು ಟಿವಿಕೆ ಶಾಸಕ ಶ್ರೀನಿವಾಸ್ ಸೇತುಪತಿ ಅವರಿಗೆ ಬಹುಮತ ಸಾಬೀತು ಪ್ರಕ್ರಿಯೆಯಲ್ಲಿ ಭಾಗಿಯಾಗದಂತೆ ಮದ್ರಾಸ್ ಹೈಕೋರ್ಟ್ ಸೂಚನೆ ನೀಡಿರುವ ಹಿನ್ನೆಲೆ ವಿಧಾನಸಭೆಯ ಬಲ 232ಕ್ಕೆ ಇಳಿದಿದ್ದು, ಬಹುಮತಕ್ಕೆ 116 ಶಾಸಕರ ಬೆಂಬಲ ಅಗತ್ಯವಿತ್ತು. ವಿಶ್ವಾಸಮತ ಗೆದ್ದ ನಂತರ ಮಾತನಾಡಿದ ಸಿಎಂ ವಿಜಯ್, ನಮ ಸರ್ಕಾರಕ್ಕೆ ಬೆಂಬಲ ಘೋಷಿಸಿದ ಎಲ್ಲಾ ಶಾಸಕರಿಗೂ ಧನ್ಯವಾದ. ನಮದು ಮೈತ್ರಿಕೂಟ ಸರ್ಕಾರ. ಜನರಿಗೆ ಕೊಟ್ಟಿರುವ ಭರವಸೆಗಳನ್ನು ಈಡೇರಿಸಲು ನಾವು ಬದ್ಧ. ನಮ ಸರ್ಕಾರ ಯಾವಾಗಲೂ ಜನಪರವಾಗಿರುತ್ತದೆ. ನಮಗೆ ಯಾರ ಮೇಲೂ ದ್ವೇಷವಿಲ್ಲ, ದ್ವೇಷ ರಾಜಕಾರಣ ಮಾಡಲ್ಲ. ಮತ ಹಾಕಿದವರು, ಹಾಕದೇ ಇರುವವರು ಎಂಬ ಭೇದ–ಭಾವ ಮಾಡಲ್ಲ. ಪೆರಿಯಾರ್, ಕಾಮರಾಜ್, ಅಂಬೇಡ್ಕರ್ ತತ್ವದಡಿ ಕೆಲಸ ಮಾಡುತ್ತೇವೆ ಎಂದರು. ಜಾತಿ, ಧರ್ಮ ಎಂದು ಪರಿಗಣಿಸದೆ ಜನರ ಅಭಿವೃದ್ಧಿಗೆ ಶ್ರಮಿಸುತ್ತೇವೆ. ತಮಿಳುನಾಡು ರಾಜ್ಯದ ಸಮಗ್ರ ಅಭಿವೃದ್ಧಿಗಾಗಿ ಕೆಲಸ ಮಾಡುತ್ತೇವೆ ಎಂದು ವಿಜಯ್ ಹೇಳಿದರು. ಟಿವಿಕೆ ಸರ್ಕಾರದ ವಿರುದ್ಧ ಉದಯನಿಧಿ ಆಕ್ರೋಶ :ವಿಶ್ವಾಸಮತ ಯಾಚನೆಗೂ ಮುನ್ನ ನಡೆದ ಚರ್ಚೆಯಲ್ಲಿ ಪ್ರತಿಪಕ್ಷ ಡಿಎಂಕೆ ನಾಯಕ ಉದಯನಿಧಿ ಸ್ಟಾಲಿನ್ ಟಿವಿಕೆ ಸರ್ಕಾರದ ವಿರುದ್ಧ ತೀವ್ರ ಆಕ್ರೋಶ ವ್ಯಕ್ತಪಡಿಸಿದರು. ಇಂದು, ವಿಶ್ವಾಸಮತ ಯಾಚನೆ ನಡೆಯುತ್ತಿದೆ. ರಾಜ್ಯದ ಎಲ್ಲಾ ಜನರು ಟಿವಿಕೆಗೆ ಮತ ಹಾಕಿಲ್ಲ. ಒಟ್ಟು 4.93 ಕೋಟಿ ಮತಗಳಲ್ಲಿ, ಕೇವಲ 1.72 ಕೋಟಿ ಜನರು ಟಿವಿಕೆಗೆ ಮತ ಹಾಕಿದ್ದಾರೆ. ಉಳಿದ ಶೇ 65 ಜನರು ಟಿವಿಕೆ ವಿರುದ್ಧ ಮತ ಹಾಕಿದ್ದಾರೆ. ಟಿವಿಕೆಗೆ ಮತ ಹಾಕಿದ ಜನರಿಗೂ ಈಗ ಜ್ಞಾನೋದಯವಾಗುತ್ತಿದೆ ಎಂದು ಹೇಳಿದರು.

## ಚಬನೂರ ಅಮೋಘಸಿದ್ದೇಶ್ವರ ಜಾತ್ರಾ ಮಹೋತ್ಸವ

ನೈಜ್ಯ ದೆಸೆ ನ್ಯೂಸ್

**ತಾಳಿಕೋಟೆ: ತಾಲ್ಲೂಕಿನ ಸುಕ್ಷೇತ್ರ ಚಬನೂರ ಗ್ರಾಮದ ಅಮೋಘ ಸಿದ್ದೇಶ್ವರ ಜಾತ್ರಾ ಮಹೋತ್ಸವವು ಇದೆ ಮೇ.16 ರಂದು ಬಾದ್ಮಿ ಅಮವಾಸೆಯಂದು ಜರುಗಲಿದೆ.**

ಮೇ.14 ರಂದು ಗುರುವಾರ ದೇವರು ಹಾಸಿಗೆ ಕೂಡುವ ಕಾರ್ಯಕ್ರಮ, ಮೇ.15ರಂದು ಶುಕ್ರವಾರ ಸಂಜೆ ಪುರಾಣ ಮಂಗಲ ಮತ್ತು ಪ್ರತಿಭಾ ಪುರಸ್ಕಾರ: ರೋಣ ತಾಲ್ಲೂಕು ಬೂದಿಹಾಳ ಗ್ರಾಮದ ಗವಿಸಿದ್ದೇಶ್ವರ ಶಾಸ್ತ್ರೀಜಿ ಅವರಿಂದ ಮೇ 5 ರಿಂದ ನಡೆದು ಬಂದ 'ಕಲ್ಯಾಣ ದರ್ಶನ' ಪ್ರವಚನ ಕಾರ್ಯಕ್ರಮವು ಮಹಾಮಂಗಳವಾಗುವುದು ಗ್ರಾಮದಲ್ಲಿಯೇ ವ್ಯಾಸಂಗ ಮಾಡಿ ಈ ಸಾಲಿನ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಉತ್ತಮ ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಮಾಡಲಾಗುವುದು, ಮೇ.16 ರಂದು ಬೃಹತ್ ಉಚಿತ ನೇತ್ರ ಮತ್ತು ಆರೋಗ್ಯತಪಾಸಣಾ ಶಿಬಿರ ನಡೆಯಲಿದ್ದು ವಿಜಯಪುರ ಅನುಗ್ರಹ ಕಣ್ಣಿನ ಆಸ್ಪತ್ರೆಯ ಮುಖ್ಯಸ್ಥ ಡಾ.ಪ್ರಭುಗೌಡ ಬ.ಲಿಂಗದಳ್ಳಿ,(ಚಬನೂರ) ಹಾಗೂ ಬಿಎಲ್.ಡಿ.ಇ ಸಂಸ್ಥೆಯ ಬಿ.ಎಂ.ಪಾಟೀಲ ವೈದ್ಯಕೀಯ ಮಹಾವಿದ್ಯಾಲಯದ ಸಂಯುಕ್ತಾಶ್ರಯದಲ್ಲಿ ಬೆಳಿಗ್ಗೆ 8.00 ಗಂಟೆಯಿಂದ ಸಂಜೆ 6.00 ಗಂಟೆಯವರೆಗೆ ಚಬನೂರ ಗ್ರಾಮದ ಆರೋಗ್ಯ ಇಲಾಖೆ ಹಾಗೂ ಸರ್ಕಾರಿ ಕನ್ನಡ ಪ್ರಾಥಮಿಕ ಶಾಲಾ ಆವರಣದಲ್ಲಿ ನಡೆಯುವುದು ಡೊಳ್ಳಿನ ಕೈಪಟ್ಟು, ವಾಲಗ, ಕೈಚಕ್ಕಳಿ ಪ್ರಸಾದ ನಂತರ ನಸುಕಿನಲ್ಲಿ ದೇವರ ಹೇಳಿಕೆ ಮೇ18 ರಂದು ದೇವರು ಗವಿಗೆ ಹೋಗುವ ಕಾರ್ಯಕ್ರಮ ಜರುಗುವುದು ಎಂದು ಜಾತ್ರಾ ಸಮಿತಿಯವರು ತಿಳಿಸಿದ್ದಾರೆ.

# ಠರಾವು ತನಿಕಾ ವ್ಯಾಪ್ತಿಗೆ ಸೇರಿಸುವಂತೆ ಒತ್ತಾಯಿಸಿ ಮನವಿ

ನೈಜ್ಯ ದೆಸೆ ನ್ಯೂಸ್

**ತಾಳಿಕೋಟಿ: ತಾಲೂಕಿನ ಕಲಕೇರಿ ಗ್ರಾಮ ಪಂಚಾಯತನಲ್ಲಿ ಸದಸ್ಯರ ಗಮನಕ್ಕೆ ತರದೇ ಮಾಡಿದ 2 ಠರಾವುಗಳನ್ನು ತನಿಖೆಯ ವ್ಯಾಪ್ತಿಗೆ ಸೇರಿಸುವಂತೆ ಒತ್ತಾಯಿಸಿ ಗ್ರಾಪಂ ಸದಸ್ಯರು ಜಿಪಂ ಸಿಇಒ ರಿಷಿ ಆನಂದ ಇವ–ರಿಗೆ ಬುಧವಾರ ಮನವಿ ಸಲ್ಲಿಸಿದರು.**

ಮನವಿ ಪತ್ರದಲ್ಲಿ ಕಲಕೇರಿ ಗ್ರಾಮ ಪಂಚಾಯತನಲ್ಲಿ ಸದಸ್ಯರ ಗಮನಕ್ಕೆ ತರದೇ ಮೀಟಿಂಗ್ ನಂಬರ್ 9 ಠರಾವು ದಿನಾಂಕ 5.7.2025 ಹಾಗೂ ಮೀಟಿಂಗ್ ನಂಬರ್ 10 ದಿನಾಂಕ 27– –11–2025 ರಂದು ಮಾಡಿದ 2 ಠರಾವುಗಳು ಸಭೆ ನಡೆಸದೆ ಮಾಡಿದ್ದು ಸದರಿ ಠರಾವುಗಳಲ್ಲಿ ಒಟ್ಟು ಸದಸ್ಯರ ಸಂಖ್ಯೆ 28



ಇದ್ದು ಹಾಜರಿದ್ದ ಸದಸ್ಯರ ಸಂಖ್ಯೆ, ಸೂಚಕರು ಹಾಗೂ ಅನುಮೋದಕರು ಇರುವುದಿಲ್ಲ. ಸದರಿ ಮೀಟಿಂಗ್ ದಿನಾಂಕದಂದು ಯಾವುದೇ ಸಭೆ ನಡೆದಿರೋದಲ್ಲ ಠರಾವು ಪುಸ್ತಕದ ಪುಟಗಳನ್ನು ಹರಿದಿದ್ದು ಇರುತ್ತದೆ.

ಗ್ರಾಪಂ ನಲ್ಲಿಯ ಭ್ರಷ್ಟಾಚಾರ ಕುರಿತು ತನಿಖಾಧಿಕಾರಿಗಳು ದಿನಾಂಕ 10.3.2026ರಂದು ಗ್ರಾಮ ಪಂಚಾಯತಗೆ ಭೇಟಿ ನೀಡಿದ ನಂತರ ಈ ಎರಡೂ ಠರಾವಗಳನ್ನು ಅನಧಿಕೃತವಾಗಿ ಬರೆದಿರುತ್ತಾರೆ. ಗ್ರಾಮ ಪಂಚಾಯತ್ ನ 15ನೇ ಹಣಕಾಸಿನಲ್ಲಿ 11 ಅಂಗಡಿಗಳನ್ನು ನಿರ್ಮಿಸಿರುವುದಾಗಿ ಪಿಡಿಒ ಅವರು ಮೀಟಿಂಗ್ ನಂಬರ್ 9ಠರಾವೂ ಸಂಖ್ಯೆ 4 ರಲ್ಲಿ ಬರೆದಿರುವಂತೆ 11 ಅಂಗಡಿಗಳ ನಿರ್ಮಾಣ–ಕ್ಕೆ ಸಂಬಂಧಿಸಿದಂತೆ ಅಂಗಡಿ ನಿರ್ಮಾಣ ಮಾಡಿರುವುದಿಲ್ಲ 66 ಅಂಗಡಿಗಳನ್ನು 73 ಜನ ನಿರ್ಮಿಸಿಕೊಂಡ ಅಂಗಡಿಗಳು ಮಾತ್ರ ಇರುತ್ತವೆ.

15ನೇ ಹಣಕಾಸಿನಲ್ಲಿ 11 ಅಂಗಡಿಗಳನ್ನು ನಿರ್ಮಾಣ ಮಾಡದೇ ಹಣ ಖರ್ಚು ಹಾಕಿರುತ್ತಾರೆ. ಸದರಿ 15ನೇ ಹಣಕಾಸಿನ ಅನುದಾನವನ್ನು ಗ್ರಾಮ ಪಂಚಾಯತ್ ಅಧ್ಯಕ್ಷರಾದ ರಾಜ ಅಹಮದ್ ಶಿರಸಗಿ, ಪಿಡಿಒ,ಕೆಲವು ಸದಸ್ಯರು ಹಾಗೂ ಗುತ್ತಿಗೆದಾರರು ಸೇರಿಕೊಂಡು ದುರುಪಯೋಗ ಮಾಡಿಕೊಂಡಿರುತ್ತಾರೆ. ಇದರ ಕುರಿತು ಸಮಗ್ರ ತನಿಖೆ ನಡೆಸಿ ತಪ್ಪಿತಸ್ಥರ ಮೇಲೆ ಮುಖದ್ದಮೆ ದಾಖಲಿಸಿ ಕಠಿಣ ಕಾನೂನು ಕ್ರಮ ಜರುಗಿಸಿ ದುರುಪಯೋಗ ಮಾಡಿಕೊಂಡ 15ನೇ ಹಣ–ಕಾಸಿನ ಅನುದಾನವನ್ನು ಪಂಚಾಯತಗೆ ಮರಳಿ ಜಮೆ ಆಗಬೇಕು ಎಂಬುದು ಪಂಚಾಯತ್ ನ ಸದಸ್ಯರಾದ ನಮ್ಮ ಒಕ್ಕೊರಲಿನ ಮನವಿ ಆಗಿರುತ್ತದೆ ಎಂದು ತಿಳಿಸಲಾಗಿದೆ. ಈ ಸಂದರ್ಭದಲ್ಲಿ ಗ್ರಾಮ ಪಂಚಾಯತ್ ಸದಸ್ಯರಾದ ಎಸ್ ಬಿ ಮೋಪುಗಾರ, ಶೋಭಾ ವಿ. ರಾಠೋಡ,ಎಸ್.ಎ.ದೇಸಾಯಿ, ರ–ಜಿಯಾ ನಾಯ್ಕೋಡಿ, ಆನಂದ್ ಅಡಕಿ, ಡಿ.ಸಿ.ಬಡಿಗೇರ, ಈರಘಂಟೆಪ್ಪ ಬಡಿಗೇರ, ನಿಂಗಮ್ಮ ಹೆಗ್ಗಣದೊಡ್ಡಿ, ಭೀಮಣ್ಣ ವಡ್ಡರ, ದ್ಯಾವಪ್ಪ ಹರಿಜನ, ಮಕ್ತುಂಬಿ ಹೊನ್ನಳ್ಳಿ ಇದ್ದರು.

# ವಿಶೇಷ ರೈಲುಗಳಿಗೆ ಖಾಯಂ ರೈಲಿನ ಭಾಗ್ಯ : ಡಾ.ಬಾಬುರಾವ್

ನೈಜ್ಯ ದೆಸೆ ನ್ಯೂಸ್

**ಕಲಬುರಗಿ: ಬೆಂಗಳೂರು ಕಲಬುರಗಿ ಮಧ್ಯೆ ಸಂಚ–ರಿಸುವ ಸಾಪ್ತಾಹಿಕ ರೈಲುಗಳನ್ನು ಕಾಯಂ ರೈಲನ್ನಾಗಿ ಓಡಿಸಲು ದಕ್ಷಿಣ ಮಧ್ಯೆ ರೈಲ್ವೆ ಮಂಡಳಿ ತೀರ್ಮಾನಿಸಿದ ಹಿನ್ನಲೆಯಲ್ಲಿ ಮೇ. 15 ರಿಂದ ಈ ಬದಲಾವಣೆ ಕಾರ್ಯಾಚರಣೆಗೆ ಬರಲಿವೆ ಎಂದು ರೈಲ್ವೆ ಸಲಹಾ ಸಮಿತಿ ಮಾಜಿ ಸದಸ್ಯ ಡಾ.ಬಾಬುರಾವ್ ತಿಳಿಸಿದ್ದಾರೆ.**

ಈ ಕುರಿತು ಹೇಳಿಕೆಯೊಂದನ್ನು ನೀಡಿರುವ ಅವರು, ಪ್ರತಿ ಶನಿವಾರ ರಾತ್ರಿ 10ಕ್ಕೆ ಹೊರಡುವ ಬೆಂಗಳೂರು ಕಂಟೋನ್ಮಂಟ್–ಕಲಬುರಗಿ (16563) ರೈಲು ಭಾನುವಾರ ಬೆಳಿಗ್ಗೆ 10.20ಕ್ಕೆ ಕಲಬುರಗಿ ತಲುಪಲಿದೆ. ಭಾನುವಾರ ಬೆಳಿಗ್ಗೆ 11.20ಕ್ಕೆ ಕಲಬುರಗಿಯಿಂದ–ಬೆಂಗಳೂರು ಕಂಟೋನ್ಮಂಟ್ಗೆ (16564) ಹೊರಡುವ ರೈಲು ಅದೇ ದಿನ ರಾತ್ರಿ 11ಕ್ಕೆ ಬೆಂಗಳೂರು ತಲುಪಲಿದೆ. ವಾರದಲ್ಲಿ ಎರಡು ದಿನ ಬೆಂಗಳೂರಿನಿಂದ



ಕಲಬುರಗಿ ಮೂಲಕ ಬೀದರ್ಗೆ ಸಂಚರಿಸುವ ವಿಶೇಷ ರೈಲನ್ನು ಕಾಯಂಗೊಳಿಸಲಾಗಿದೆ. ಈ ಬದಲಾವಣೆ ಮೇ 15ರಿಂದ ಜಾರಿಗೆ ಬರಲಿದೆ.

ಪ್ರತಿ ಶುಕ್ರವಾರ ಮತ್ತು ಭಾನುವಾರ ರಾತ್ರಿ 9.15ಕ್ಕೆ ಬೆಂಗಳೂರಿನಿಂದ ವಿಶ್ವೇಶ್ವರಯ್ಯ ಟರ್ಮಿನಲ್ನಿಂದ ಹೊರಡುವ ರೈಲು (16559) ಮರುದಿನ ಬೆಳಿಗ್ಗೆ 9.05ಕ್ಕೆ ಕಲಬುರಗಿ ತಲುಪಲಿದೆ. ಮಧ್ಯಾಹ್ನ 12.15ಕ್ಕೆ ಬೀದರ್ ತಲುಪಲಿದೆ. ಪ್ರತಿ ಶನಿವಾರ ಮತ್ತು ಸೋಮವಾರ ಬೀದರ್ನಿಂದ (16560) ಮಧ್ಯಾಹ್ನ 2ಕ್ಕೆ ಹೊರಡುವ ರೈಲು ಸಂಜೆ 5ಕ್ಕೆ ಕಲಬುರಗಿ ತಲುಪಲಿದ್ದು, ಮರುದಿನ ಬೆಳಿಗ್ಗೆ 4ಕ್ಕೆ ಬೆಂಗಳೂರಿನ ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್ ತಲುಪಲಿದೆ. ಈ ರೈಲುಗಳು ಯಲಹಂಕ, ಹಿಂದುಪುರ, ಧರ್ಮಾವರಂ, ಅನಂತಪುರ, ಗುಂತಕಲ್, ಆದೋನಿ, ಮಂತ್ರಾಲಯಂ ರೋಡ್, ರಾಯಚೂರು, ಕೃಷ್ಣಾ, ಯಾದಗಿರಿ, ವಾಡಿ, ಶಹಬಾದ್, ಕಲಬುರಗಿ ಮತ್ತು ಹುಮನಾಬಾದ್ ಸ್ಟೇಶನ್ ಗಳಲ್ಲಿ ನಿಲುಗಡೆಯಾಗಲಿವೆ. ಅದೇ ರೀತಿ ಹೈದ್ರಾಬಾದ್–ಬೆಳಗಾವಿ– ಹೈದ್ರಾಬಾದ್ ಸಾಪ್ತಾಹಿಕ ಎಕ್ಸ ಪ್ರೆಸ್ ರೈಲು (ಸಂಖ್ಯೆ 17072) ಮೇ.15 ರಂದು ಶುಕ್ರವಾರ ಪ್ರಾರಂಭವಾಗಲಿದ್ದು, ಬೆಳಿಗ್ಗೆ 5.27 ಕ್ಕೆ ಹೈದ್ರಾಬಾದ್ ನಿಂದ ನಿರ್ಗಮಿಸಿ, ಮರುದಿನ ಬೆಳಿಗ್ಗೆ 7 ಗಂಟೆಗೆ ಬೆಳಗಾವಿಗೆ ತಲುಪಲಿದೆ.

ಮೇ.21 ರಂದು ಗುರುವಾರ ಸಂಜೆ 4.30 ಕ್ಕೆ ಬೆಳಗಾವಿಯಿಂದ ರೈಲು( ಸಂಖ್ಯೆ 17071) ನಿರ್ಗಮಿಸಿ ಮರುದಿನ ಮಧ್ಯಾಹ್ನ 4.40 ಕ್ಕೆ ತಲುಪಲಿದೆ. ರಾಯಚೂರಿಗೆ ರಾತ್ರಿ 9.38 ಕ್ಕೆ ಬರಲಿದೆ. ಈ ರೈಲು ಹೈದ್ರಾಬಾದ್, ಬೇಗಂ ಪೇಟೆ, ಲಿಂಗಂಪಲ್ಲಿ, ವಿಕಾರಾಬಾದ್, ತಾಂಡೂರು, ಯಾದಗಿರಿ, ಕೃಷ್ಣಾ, ರಾಯಚೂರು, ಮಂತ್ರಾಲಯಂ ರೋಡ್, ಆದ–ೋನಿ, ಗುಂತಕಲ್, ಬಳ್ಳಾರಿ ಜಂಕ್ಷನ್, ದರೋಜಿ, ತೋರಣಗಲ್,ಹೊಸಪೇಟೆ,ಜಂಕ್ಷನ್,ಕೊಪ್ಪಳ,ಗದಗ, ಹುಬ್ಬಳ್ಳಿ ಜಂಕ್ಷನ್, ಧಾರವಾಡ, ಲೊಂಡಾ ಜಂಕ್ಷನ್, ಖಾನಾಪೂರ ಸ್ಟೇಶನ್ ಗಳಲ್ಲಿ ನಿಲುಗಡೆಯಾಗಲಿದೆ. ಇದುವರೆಗೆ ವಿಶೇಷ ರೈಲಾಗಿದ್ದರಿಂದ ಗ್ರಾಹಕರಿಂದ ತತ್ಕಾಲ್ ಟಿಕೆಟ್ನಂತೆ ಹೆಚ್ಚುವರಿ ದರ ವಿಧಿಸಲಾಗುತ್ತಿತ್ತು. ಕಾಯಂ ರೈಲಾಗಿ ಪರಿವರ್ತನೆಯಾಗಿದ್ದ–ರಿಂದ ಸಾಮಾನ್ಯ ದರ ಆಕರಿಸಲಾಗುತ್ತಿದೆ.

# ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಬಳ್ಳಾರಿ ಜಿಲ್ಲೆ ರಾಜ್ಯಕ್ಕೆ ಎರಡನೇ ಸ್ಥಾನ ರಾಯಚೂರು ಫಸ್ಟ್ ಬಳ್ಳಾರಿ ಸೆಕೆಂಡ್

ನೈಜ್ಯ ದೆಸೆ ನ್ಯೂಸ್

**ಸಿರುಗುಪ್ಪ: ಮಾನವ ದಿನಗಳ ಸೃಜನೆಯಲ್ಲಿ ಬಳ್ಳಾರಿ ಜಿಲ್ಲೆಗೆ ಮೇ ಅಂತ್ಯದವರೆಗೆ ನಿಗದಿಯಾಗಿದ್ದ 18.45 ಲಕ್ಷ ಸೃಜನೆ ಗುರಿಯಲ್ಲಿ ಈವರೆಗೆ 2,52,011 ಸೃಜಿಸುವ ಮೂಲಕ ರಾಜ್ಯಕ್ಕೆ ಎರಡನೇ ಸ್ಥಾನದಲ್ಲಿ ಗುರುತಿಸಿಕೊಂಡಿದೆ ರಾಯಚೂರು ಜಿಲ್ಲೆ ಮೊದಲನೇ ಸ್ಥಾನದಲ್ಲಿ ವಿಜಯನಗರ ಜಿಲ್ಲೆ 3ನೇ ಸ್ಥಾನದಲ್ಲಿದೆ ಉದ್ಯೋಗದಲ್ಲಿ ಪಾಲ್ಗೊಳ್ಳುವ ಕಾರ್ಮಿಕರ ಪೈಕಿ ಜಿಲ್ಲೆಯಲ್ಲಿ ಶೇ. 59.29 ರಷ್ಟು ಮಹಿಳಾ ಕಾರ್ಮಿಕರೇ ಹೆಚ್ಚಿನ ಸಂಖ್ಯೆಯಲ್ಲಿರುವುದು ಗಮನಾರ್ಹವಾಗಿದೆ.**

ಎಂದು ಲೋಕ ಶಿಕ್ಷಣ ಸಾಕ್ಷರತಾ ಸದಸ್ಯರು ಸಾಮಾಜಿಕ ಕಾರ್ಯಕರ್ತ ಅಬ್ದುಲ್ ನಬಿಯವರು ತಿಳಿಸಿದರು ಬಳ್ಳಾರಿ ಜಿಲ್ಲೆಯ 100 ಗ್ರಾಮ ಪಂಚಾಯಿತಿಗಳಲ್ಲಿ 2.50 ಲಕ್ಷ ಮಾನವ ದಿನ ಸೃಜನೇ ಮನರೇಗಾ ಕೆಲಸದಲ್ಲಿ 25,169 ಕುಟುಂಬಗಳು ಸಕ್ರಿಯ ಬಳ್ಳಾರಿ ಜಿಲ್ಲೆಯಲ್ಲಿ ಒಟ್ಟು 1.85 ಲಕ್ಷ ಉದ್ಯೋಗ ಚಿಟೀಗಳು ವಿಕಸಿತ ಭಾರತ ರೋಜ್ ಗಾರ್ ಮತ್ತು ಆಜೀವಿಕಾ ಮಿಷನ್ (ವಿಬಿ– ಜಿ ರಾಮ್ ಜಿ ) ಯೋಜನೆ ಅಡಿ ಪ್ರಸಕ್ತ ಸಾಲಿನಲ್ಲಿ ಆರಂಭಗೊಂಡಿರುವ ಕಾಮಗಾ–ರಿಗಳಲ್ಲಿ ಮಾನವ ದಿನಗಳ ಸೃಜನೆಯಲ್ಲಿ ಗಣಿ ಜಿಲ್ಲೆ ರಾಜ್ಯಕ್ಕೆ ಎರಡನೇ ಸ್ಥಾನದಲ್ಲಿ ಗುರುತಿಸಿಕೊಂಡಿದೆ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆಯನ್ನು ಮರುರೂಪಿಸಿ ಜಾರಿಗೆ ತರಲಾದ ವಿ ಬಿ ಐ ರಾಮ್ ಜಿ ಹೊಸ ಕಾಯಿದೆಯಡಿ ಪ್ರಸಕ್ತ



ಸಾಲಿನಿಂದ ಜಿಲ್ಲೆಯಲ್ಲಿ ಬದಲಾದ ಹೊಸ ರೂಪದೊಂದಿಗೆ ಚಾಲನೆ ನೀಡಲಾಗಿದೆ.

ಜಿಲ್ಲೆಯ ಬಳ್ಳಾರಿ ಸಂಡೂರು ಕಂಪ್ಲಿ ಕುರುಗೋಡು ಸಿರುಗುಪ್ಪ ಒಟ್ಟು ಐದು ತಾಲೂಕುಗಳಲ್ಲಿ 100 ಗ್ರಾಮ ಪಂಚಾಯಿತಿಗಳಿದ್ದು ಪ್ರಸಕ್ತ 2026–27 ನೇ ಸಾಲಿನಲ್ಲಿ ವಿಬಿ– ಜಿ ರಾಮ್ ಜಿ ಅಡಿ ಮೇ ಅಂತ್ಯದವರೆಗೆ 18.45 ಲಕ್ಷ ಮಾನ ದಿನಗಳ ಸೃಜನೆ ಗುರಿ ಹೊಂದಿದ್ದು ಸಾಧನೆಗಾಗಿ ಜಿಲ್ಲೆಯಲ್ಲಿ ಏಪ್ರಿಲ್ ನಿಂದ ಕಾಮಗಾರಿ ಭರದಿಂದ ಪ್ರಾರಂಭಗೊಳಿಸಲಾಗಿದೆ ಬಳ್ಳಾರಿ ಜಿಲ್ಲೆಯಲ್ಲಿ ಒಟ್ಟು 1,85,797 ಉದ್ಯೋಗ ಚೀಟಿಗಳು ನೋಂದಾಣಿಯಾಗಿವೆ ಅದರಲ್ಲಿ 22,387 ಕುಟುಂಬಗಳ ಕಾರ್ಮಿಕರು ಸಕ್ರಿಯವಾಗಿ ಉದ್ಯೋಗದಲ್ಲಿ ತೊಡಗಿಸಿಕೊಂಡಿದ್ದಾರೆ ಪ್ರಸಕ್ತ ಸಾಲಿನಲ್ಲಿ ಮಾನವ ದಿನಗಳ ಗುರಿ ತಲುಪಲು ತಾಲೂಕುವಾರು ನಿಗದಿಪಡಿಸಿದ ಗುರಿಯನ್ನು ಬೆನ್ನತ್ತುವ ಮೂಲಕ ಮಾನವ ದಿನಗಳ ಸೃಜನೆಯಲ್ಲಿ ರಾಜ್ಯದಲ್ಲಿಯೇ ಗಮನ ಸೆಳೆದಿದೆ ಬಳ್ಳಾರಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮಹಮ್ಮದ್ ಹಾರೀಸ್ ಸುಮೇರ್ ಪ್ರಕಟಿಸಿದ್ದಾರೆ.

ಬಳ್ಳಾರಿ ಜಿಲ್ಲೆಯ ಬಳ್ಳಾರಿ ಸಿರುಗುಪ್ಪ ಸಂಡೂರು ಕುರುಗೋಡು ಕಂಪ್ಲಿ 5 ತಾಲೂಕುಗಳಿಗೆ ನಿಗದಿಪಡಿಸಿದ 18.45 ಲಕ್ಷ ಮಾನವ ದಿನಗಳ ಸೃಜನೆಯ ಗುರಿ ಸಾಧಿಸಲು ಗ್ರಾಮಗಳಿಗೆ ಜಿಲ್ಲಾ ಪಂಚಾಯತ್ ಬೆನ್ನು ಬಿದ್ದಿದೆ ಪ್ರಸಕ್ತ ಸಾಲಿನಲ್ಲಿ ಹೊಸ ಕಾಯಿದೆ ಅಡಿ ಜಾರಿ ಗೊಂಡಿರುವ ವಿವಿಜಿ ರಾಮ್ ಜಿ ಅಡಿ ಮಾನವ ದಿನಗಳ ಸೃಜನೆಗೆ ವಿವಿಧ ಗೊಂದಲಗಳು ಸ್ಥಳೀಯ ಗ್ರಾಮ ಪಂಚಾಯತ್ ಮಟ್ಟದಲ್ಲಿ ಕಾಡುವಂತಾಗಿದೆ ಇದರಿಂದಾಗಿ ಕಳೆದ ವರ್ಷಕ್ಕಿಂತ ಈ ಬಾರಿ ಕಡಿಮೆ ಪ್ರಮಾಣದಲ್ಲಿ ಗುರಿ ನಿಗದಿ ಯಾಗಿದ್ದರು ಸಾಧನೆಗೆ ಯೋಜನೆಯ ಅನುಷ್ಠಾನಾಧಿಕಾರಿಗಳು ಹರ ಸಾಹಸ ಪಡುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ ಅದರ ನಡುವೆಯೂ ಮಾನವ ದಿನಗಳ ಸೃಜನೆಯಲ್ಲಿ ರಾಜ್ಯದಲ್ಲಿ ಮುನ್ನಡೆ ಸಾಧಿಸುವ ಮೂಲಕ ಬಳ್ಳಾರಿ ಜಿಲ್ಲೆ ಗಮನ ಸೆಳೆದಿದೆ.

ಬಳ್ಳಾರಿ ಜಿಲ್ಲೆಯಲ್ಲಿ ಮನರೇಗಾದಡಿ ತಾಲೂಕು ವಾರು ಮಾನವ ದಿನ ಗುರಿ ಹಾಗೂ ಕೈಗೊಂಡ ಕಾಮಗಾರಿಗಳ ಅಂಕಿ ಅಂಶ ಬಳ್ಳಾರಿ 25 ಗ್ರಾಮ ಪಂಚಾಯತ್ ಕೈಗೊಡ ಕಾಮಗಾರಿ 402 ಗುರಿ 4,44,398, ಕಂಪ್ಲಿ 10 ಗ್ರಾಮ ಪಂಚಾಯಿತ್ 203 ಕೈಗೊಡ ಕಾಮಗಾರಿ 2,66,288 ಗುರಿ, ಕುರುಗೋಡು 12 ಗ್ರಾಮ ಪಂಚಾಯತ್ 241 ಕೈಗೊಡ ಕಾಮಗಾರಿ 3,15,426 ಗುರಿ, ಸಂಡೂರು 26 ಗ್ರಾಮ ಪಂಚಾಯತ್ 543 ಕೈಗೊಡ ಕಾಮಗಾರಿ 3,71,324 ಗುರಿ, ಸಿರುಗುಪ್ಪ 27 ಗ್ರಾಮ ಪಂಚಾಯತ್ 754 ಕೈಗೊಡ ಕಾಮಗಾರಿ 4,47,569 ಗುರಿ ಬಳ್ಳಾರಿ ಜಿಲ್ಲೆಯಲ್ಲಿ ಮನರೇಗಾದಡಿ ಕೈಗೊಳ್ಳುವ ಕಾಮಗಾರಿಗಳಿಗೆ ಮಾನವ ದಿನಗಳ ಸೃಜನೆಗೆ ಸಂಬಂಧಿಸಿದಂತೆ ಸಕಾಲಕ್ಕೆ ಅನುದಾನ ಪಾವತಿಸಲಾಗುತ್ತಿದೆ.

ಆದರೆ ಸಾಮಗ್ರಿ ವೆಚ್ಚ ಅನುದಾನಕ್ಕಾಗಿ ವರ್ಷಾನುಗಟ್ಟಲೇ ಕಾಯುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ ಕಳೆದ 2024–25 ನೇ ಸಾಲಿನಲ್ಲಿ 16.46 ಕೋಟಿ ರೂ ಹಾಗೂ ಪ್ರಸಕ್ತ 2026–27 ನೇ ಸಾಲಿನಲ್ಲಿ 1.4 ಕೋಟಿ ರೂ ಸೇರಿ ಒಟ್ಟು 22.84 ಕೋಟಿ ರೂ ಅನುದಾನ ಸರ್ಕಾರದಿಂದ ಬಿಡುಗಡೆ ಬಾಕಿಯಿದೆ ಬಳ್ಳಾರಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮಹಮ್ಮದ್ ಹಾರಿಸ್ ಸುಮೇರ್ ಅವರು ಮಾತನಾಡಿ ಮನರೇಗಾ ಮಾನವ ದಿನಗಳ ಸೃಜನೆಯಲ್ಲಿ ಬಳ್ಳಾರಿ ಜಿಲ್ಲೆ ರಾಜ್ಯಕ್ಕೆ ಎರಡನೇ ಸ್ಥಾನದಲ್ಲಿ ಗುರುತಿಸಿಕೊಂಡಿದೆ ಜಿಲ್ಲೆಗೆ ಪ್ರಸಕ್ತ ಸಾಲಿನಲ್ಲಿ 18.45 ಲಕ್ಷ ಸೃಜನ ಗುರಿ ನೀಡಿದ್ದು ಅದರಲ್ಲಿ ಈಗಾಗಲೇ 2.22 ಲಕ್ಷ ಮಾನವ ದಿನಗಳನ್ನು ಸೃಜಿಸಲಾಗಿದೆ ನಿತ್ಯ 1 ಲಕ್ಷ ಕಾರ್ಮಿಕರು ಉದ್ಯೋಗದಲ್ಲಿ ತೊಡಗಿಸಿಕೊಳ್ಳಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಅವರು ವಿವರಿಸಿ ಹೇಳಿದರೆ ಎಂದು ಸಾಮಾಜಿ–ಕ ಕಾರ್ಯಕರ್ತ ಅಬ್ದುಲ್ ನಬಿ ತಿಳಿಸಿದ್ದಾರೆ.

ವರದಿ : ಮಸೀದಿ, ಅಬ್ದುಲ್ ಗೌಸ್, ಸಿರುಗುಪ್ಪ

# ಮಾಹಿತಿ ನೀಡದ ಕಲ್ಬುರ್ಗಿ ಜಿ.ಪಂ ಉಪ ಕಾರ್ಯದರ್ಶಿ ಸೇರಿ 17 ಮಂದಿ ಅಧಿಕಾರಿಗಳಿಗೆ ದಂಡ: ಬಿ. ವೆಂಕಟಸಿಂಗ್

ನೈಜ್ಯ ದೆಸೆ ನ್ಯೂಸ್

**ರಾಯಚೂರು: ಸಕಾಲಕ್ಕೆ ಮಾಹಿತಿ ನೀಡಲು ನಿರ್ಲಕ್ಷ್ಯ ವಹಿಸುವುದು ಸೇರಿದಂತೆ ವಿಚಾರಣೆಗೆ ಗೈರು ಹಾಜರಾಗಿ ಆಯೋಗದ ನೋಟಿಸ ಗೆ ಸ್ಪಂದನೆ ನೀಡದ ಕಾರಣ ಕಲ್ಬುರ್ಗಿ ಜಿಲ್ಲಾ ಪಂಚಾಯತ ಉಪ ಕಾರ್ಯದರ್ಶಿ ಲಕ್ಷ್ಮಣ ಶೃಂಗೇರಿ, ಹಾಗೂ ಗಂಗಾವತಿ ತಾಲೂಕು ಲೋಕೋಪಯೋಗಿ ಇಲಾಖೆಯ ಸಹಾಯಕ ಕಾರ್ಯ ಪಾಲಾನಾ ಅಭಿಯಂತರ ದೇವಣ್ಣ ಕಟ್ಟಿ, ರಾಯಚೂರು ತಾಲೂಕು ಗ್ರೇಡ್–2 ತಹಸೀಲ್ದಾರ್ ಪರಶುರಾಮ್ ಸೇರಿ ಹಲವು ಗ್ರಾ.ಪಂ. ಅಭಿವೃದ್ಧಿ ಅಧಿಕಾರಿಗಳಿಗೆ ಹಾಗೂ ಗ್ರಾಮ ಪಂಚಾಯತ ಕಾರ್ಯದರ್ಶಿಗಳಿಗೆ ರಾಜ್ಯ ಮಾಹಿತಿ ಆಯೋಗದ ಕಲ್ಬುರ್ಗಿ ಪೀಠ ದಿಂದ ದಂಡ ವಿಧಿಸಿ ಆದೇಶ ಮಾಡಲಾಗಿದೆ ಎಂದು ರಾಜ್ಯ ಮಾಹಿತಿ ಆಯುಕ್ತರಾದ ಬಿ.ವೆಂಕಟ ಸಿಂಗ್ ತಿಳಿಸಿದ್ದಾರೆ.**

ಏಪ್ರಿಲ್ ತಿಂಗಳಿನಲ್ಲಿ ನಡೆದ ವಿಚಾರಣೆ ವೇಳೆ ಗೈರು ಹಾಜರಾಗಿದ್ದಲ್ಲದೆ, ಮಾಹಿತಿ ನೀಡದ ಕಾರಣ ಕಲ್ಬುರ್ಗಿ ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಶ್ರೀ ಲಕ್ಷ್ಮಣ ಶೃಂಗೇ–ರಿಗೆ 10 ಸಾವಿರ, ಗಂಗಾವತಿ ತಾಲೂಕು ಲೋಕೋಪಯೋಗಿ ಇಲಾಖೆಯ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರ ದೇವಣ್ಣ ಕಟ್ಟಿಗೆ 15 ಸಾವಿರ,ರಾಯಚೂರು ತಾಲೂಕು ಗ್ರೇಡ್ 2 ತಹಸೀಲ್ದಾರ್ ಪರಶುರಾಮ ಗೆ 5 ಸಾವಿರ,ಜೇವರ್ಗಿ ತಾಲೂಕಿನ ಹುಲ್ಲೂರ ಗ್ರಾ.ಪಂ ಕಾರ್ಯದರ್ಶಿ ಮಲ್ಲಿಕಾರ್ಜುನಗೆ 5 ಸಾವಿರ, ಸುರುಪುರ ತಾಲೂಕಿನ ಆಲ್ದಾಳ ಗ್ರಾ.ಪಂ. ಕಾರ್ಯದರ್ಶಿ ರಾಜಕುಮಾರ ಸುಬೆದಾರಗೆ 10 ಸಾವಿರ, ಮಾನ್ವಿ ತಾಲೂಕಿನ ಆರೋಲಿ ಗ್ರಾಪಂ ಪಿ.ಡಿ.ಓ ರಘುನಾಥ–'ಗೆ 5 ಸಾವಿರ, ಆಳಂದ ತಾಲೂಕಿನ ಯಲಸಂಗಿ ಗ್ರಾ.ಪಂ ಪಿ.ಡಿ.ಓ ಜಗದೀಶಗೆ 15 ಸಾವಿರ,

ಆಳಂದ್ ತಾಲೂಕ ಮುನಲ್ಲಿ ಗ್ರಾಮ ಪಂಚಾಯತ್ ಪಿ. ಡಿ ಓ. ಭೀಮರಾವ್ ಗೆ 10 ಸಾವಿರ ಸುರಪುರ ತಾಲೂಕಿನ ನಗನೂರು ಗ್ರಾಪಂ ಕಾರ್ಯದರ್ಶಿಯಾದ ಮಡಿವಾಳಪ್ಪಗೆ 10 ಸಾವಿರ, ಶಹಪುರ ತಾಲೂಕಿನ ಗೋಗಿ.ಕೆ. ಗ್ರಾ.ಪಂ. ಪಿ.ಡಿ.ಓ. ಸಿದ್ರಾಮಗೆ 10 ಸಾವಿರ, ಸಂಡೂರು ತಾಲೂಕಿನ ಹೊಸದರೋಜಿ ಗ್ರಾಪಂ ಕಾರ್ಯದರ್ಶಿ ಕಲ್ಲಪ್ಪಗೆ 10 ಸಾವಿರ, ಯಾದಗಿರ ತಾಲೂಕಿನ ಸೈದಾಪುರ ಗ್ರಾ.ಪಂ ಪಿ.ಡಿ.ಓ ಮುದುಕಣ್ಣ ಗೆ 10 ಸಾವಿರ, ವಡಗೇರಾ



ತಾಲೂಕಿನ ತಡಿಬಿಡಿ ಗ್ರಾ.ಪಂ. ಕಾರ್ಯದರ್ಶಿ ಯಂಕನಗೌಡಗೆ 5 ಸಾವಿರ, ಕಾರಟಗಿ ತಾಲೂಕಿನ ಸಿದ್ದಾಪುರ ಗ್ರಾಪಂ ಕಾರ್ಯದರ್ಶಿ ಶ್ರೀಮತಿ ಜೋತಿ ರೆಡ್ಡರ್‌ಗೆ 10 ಸಾ ವಿರ ಕಲ್ಬುರ್ಗಿ ತಾಲೂಕಿನ ಹಾಗಾರಗ ಗ್ರಾ.ಪಂ. ಕಾರ್ಯದರ್ಶಿ ವೇದಾಂಗಗೆ 5 ಸಾವಿರ, ಲಿಂಗಸೂಗೂರು ತಾಲೂಕಿನ ಪೈದೊಡ್ಡಿ ಗ್ರಾ.ಪಂ.ನ ಕಾರ್ಯದರ್ಶಿ ಭೀಮಣ್ಣಗೆ 10 ಸಾವಿರ,

ಯಾದಗಿರ ತಾಲೂಕಿನ ರಾಮ ಸಮುದ್ರ ಗ್ರಾ.ಪಂ. ಕಾರ್ಯದರ್ಶಿ ಗಾಲಿಬಸಾಬ ಗೆ 5 ಸಾವಿರ ಹಾಗೂ ರಾಯಚೂರು ತಾಲೂಕಿನ ಗ್ರೇಡ್–2 ತಹಶೀಲದಾರ ಪರುಶುರಾಮಗೆ 5 ಸಾವಿರ ಸೇರಿ ಒಟ್ಟು 18 ಅಧಿಕಾರಿಗಳಿಗೆ ಏಪ್ರೀಲ್ ತಿಂಗಳಿನಲ್ಲಿ 1 ಲಕ್ಷ 50 ಸಾವಿರ ದಂಡ ವಿಧಿಸಲಾಗಿದೆ ಎಂದು ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಏಪ್ರೀಲ್ ತಿಂಗಳಲ್ಲಿ 564 ಪ್ರಕರಣಗಳು ವಿಚಾರಣೆಗೆ ಕೈಗೆತ್ತಿಕೊಂಡು 229 ಪ್ರಕರಣಗಳು ವಿಲೇವಾರಿ ಮಾಡಲಾಗಿದೆ ಎಂದು ತಿಳಿಸಿದ್ದಾರೆ. ತಾವು ಅಧಿಕಾರ ಸ್ವೀಕರಿಸಿದ ಬಳಿಕ ಒಟ್ಟು 3,084 ಪ್ರಕರಣಗಳು ಕೈಗೆತ್ತಿಕೊಂಡು 88 ದಿನ ವಿಚಾರಣೆ ನಡೆಸಿ 1,308 ಪ್ರಕರಣಗಳು ವಿಲೇವಾರಿ ಮಾಡಿರುವುದಾಗಿ ಆಯುಕ್ತರಾದ ಬಿ. ವೆಂಕಟ್ ಸಿಂಗ್ ತಿಳಿಸಿದ್ದಾರೆ.

ಪ್ರಕರಣಗಳ ತ್ವರಿತ ವಿಲೇವಾರಿಗೆ ಅನೂಕೂಲವಾಗಲು ಅಧಿಕಾರಿಗಳಿಗೆ ಮಾಹಿತಿ ಹಕ್ಕು ಅಧಿನಿಯಮ ಕುರಿತು ಅರಿವು ಮುಡಿಸಲು ಈಗಾಗಲೇ ಬಳ್ಳಾರಿ, ಬೀದರ್, ಕಲ್ಬುರ್ಗಿ ಹಾಗೂ ಕೊಪ್ಪಳದಲ್ಲಿ ಕಾರ್ಯಗಾರ ನಡೆಸಿದ್ದು ಈ ತಿಂಗಳ 30 ರಂದು ವಿಜಯನಗರ ಜಿಲ್ಲೆಯಲ್ಲಿ ಕಾರ್ಯಗಾರ ಹಮ್ಮಿಕೊಂಡಿರುವುದಾಗಿ ತಿಳಿಸಿದ್ದಾರೆ. ಇದೆ ವೇಳೆ ವಡೆಗೇರ ತಾಲೂಕ ಉಲ್ಲೆಸುಗೂರು ಗ್ರಾಪಂ ಪಿ. ಡಿ. ಓ, ಸೇಡಂ ತಾಲೂಕ ಅಡಕಿ ಗ್ರಾಪಂ ಪಿ. ಡಿ ಓ, ಜೇವರ್ಗಿ ತಾಲೂಕ ನೆಲೋಗಿ ಗ್ರಾಪಂ ಪಿ. ಡಿ. ಓ.ಅವರಿಂದ ಅನುಕ್ರಮವಾಗಿ, 5 ಸಾವಿರ,15 ಸಾವಿರ, 10 ಸಾವಿರ,ಸೇರಿ 30 ಸಾವಿರ ದಂಡ ವಸೂಲಿ ಮಾಡಲಾಗಿದೆ. ಕಾರಿನಲ್ಲಿ ತುಂಬಿ ಕೊಂಡು ಬಂದ ಮಾಹಿತಿ ಬಂಡಲ್: ಜೇವರ್ಗಿ ತಾಲೂಕ ಹರ್ನಲ್ ಕೆ. ಗ್ರಾಮದ ಬಾಬು ದೊಡ್ಡಮನಿ ಅವರು ಕೇಳಿದ ಜೇವರ್ಗಿ ತಾಲೂಕ ಶಿಶು ಅಭಿವೃದ್ಧಿ ಯೋಜನೆ ಅಧಿಕಾರಿಗೆ ಕೇಳಿದ ಮಾಹಿತಿ ಕಾರಿ ನಲ್ಲಿ ತುಂಬಿ ಕೊಂಡು ಬಂದು ವಿಚಾರಣೆ ವೇಳೆ ನೀಡಲಾಯಿತು. ಆಯೋಗ ಮಾಡಿದ ಆದ–'ೇಶ ದಂತೆ ಜೇವರ್ಗಿ ಸಿ.ಡಿ.ಪಿ.ಓ ಭೀಮರಾಯ ತಮ್ಮ ಕಚೇರಿಯಲ್ಲಿ ಲಭ್ಯ ಮಾಹಿತಿ ಕಲೆ ಹಾಕಿ ಸುಮಾರ 20ಕ್ಕೂ ಹೆಚ್ಚು ಬಂಡಲ ಕಾರಿನಲ್ಲಿ ತುಂಬಿಕೊಂಡು ಬಂದು ಅರ್ಜಿದಾರನಿಗೆ ನೀಡಿದರು.

## ಶಿಕ್ಷಣ ಮಾರ್ಗದರ್ಶಿ ವಿಶೇಷ

### ಐಟಿಐ ಎಲೆಕ್ಟ್ರಾನಿಕ್ಸ್ ಮೆಕ್ಯಾನಿಕ್

ಐಟಿಐ ಎಲೆಕ್ಟ್ರಾನಿಕ್ಸ್ ಮೆಕ್ಯಾನಿಕ್ಎಂಬುದು 2 ವರ್ಷಗಳ ವೃತ್ತಿಪರ ಕೋರ್ಸ್ ವಿದ್ಯಾರ್ಥಿಗಳಿಗೆ ಎಲೆಕ್ಟ್ರಾನಿಕ್ ಹಾರ್ಡ್‌ವೇರ್, ಸರ್ಕ್ಯೂಟ್‌ಗಳು ಮತ್ತು ಕಮ್ಯುನಿಕೇಷನ್ ಸಾಧನಗಳ ದುರಸ್ತಿ ಹಾಗೂ ನಿರ್ವಹಣೆಯಲ್ಲಿ ಪ್ರಾಯೋಗಿಕ ಜ್ಞಾನವನ್ನು ನೀಡುತ್ತದೆ. ಇದು ಕೈಗಾರಿಕೆಗಳು, ಐಟಿ ವಲಯ ಮತ್ತು ಗ್ರಾಹಕ ಎಲೆಕ್ಟ್ರಾನಿಕ್ಸ್ ಕ್ಷೇತ್ರಗಳಲ್ಲಿ ಉದ್ಯೋಗಾವಕಾಶಗಳನ್ನು ಹೆಚ್ಚಿಸುತ್ತದೆ.ಕೋರ್ಸ್‌ನ ಸಂಪೂರ್ಣ ವಿವರಗಳು ಇಲ್ಲಿವೆ: ಕೋರ್ಸ್‌ನ ಉದ್ದೇಶಕಾಲಾವಧಿ: 2 ವರ್ಷಗಳುಕೋರ್ಸ್ ವಿಧ: ತಾಂತ್ರಿಕ ಮತ್ತು ಪ್ರಾಯೋಗಿಕ ತರಬೇತಿ (Trade Course) ಕಲಿಕಾ ವಿಷಯಗಳು: ಟ್ರಾನ್ಸಿಸ್ಟರ್‌ಗಳು, ಡಯೋಡ್‌ಗಳು, ರೇಡಿಯೋ, ಟಿ.ವಿ, ಮೊಬೈಲ್ ದುರಸ್ತಿ, ಪವರ್ ಸಪ್ಲೈ, ಮೈಕ್ರೋಕಂಟ್ರೋಲರ್‌ಗಳು, ಮತ್ತು ಆಧುನಿಕ ಡಿಜಿಟಲ್ ಎಲೆಕ್ಟ್ರಾನಿಕ್ಸ್ ಬಗ್ಗೆ ಸಮಗ್ರ ಮಾಹಿತಿ. ಅರ್ಹತೆ ಮತ್ತು ಪ್ರವೇಶವಿದ್ಯಾರ್ಹತೆ: ಕನಿಷ್ಠ 10ನೇ ತರಗತಿ ಉತ್ತೀರ್ಣರಾಗಿರಬೇಕು (ಗಣಿತ ಮತ್ತು ವಿಜ್ಞಾನ ವಿಷಯಗಳಿಗೆ ಆದ್ಯತೆ). ವಯೋಮಿತಿ: ಸಾಮಾನ್ಯವಾಗಿ 14 ವರ್ಷ ಮೇಲ್ಪಟ್ಟವರು ಅರ್ಜಿ ಸಲ್ಲಿಸಬಹುದು. ಪ್ರವೇಶ ಪ್ರಕ್ರಿಯೆ: ಆಯಾ ರಾಜ್ಯಗಳ ಕೈಗಾರಿಕಾ ತರಬೇತಿ ಇಲಾಖೆಯ (Department of Employment and Training) ಮೂಲಕ ನೇರ ಅಥವಾ ಮೆರಿಟ್ ಆಧಾರದ ಮೇಲೆ ಪ್ರವೇಶ ಪಡೆಯಬಹುದು. ಉದ್ಯೋಗಾವಕಾಶಗಳು (Job Roles) ಕೋರ್ಸ್ ಮುಗಿದ ನಂತರ ಕೆಳಗಿನ ಹುದ್ದೆಗಳಿಗೆ ಅರ್ಜಿ ಸಲ್ಲಿಸಬಹುದು:ಎಲೆಕ್ಟ್ರಾನಿಕ್ಸ್ ಟೆಕ್ನಿಷಿಯನ್ (Electronics Technician) ಟಿ.ವಿ, ಆಡಿಯೋ ಮತ್ತು ಮೊಬೈಲ್ ರಿಪೇರಿ ತಜ್ಞಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ ಉಪಕರಣಗಳ ನಿರ್ವಾಹಕ (Maintenance Technician) ಫೀಲ್ಡ್ ಸರ್ವಿಸ್ ಇಂಜಿನಿಯರ್ (Field Service Engineer) ಉನ್ನತ ವ್ಯಾಸಂಗ ಮತ್ತು ಭವಿಷ್ಯಐಟಿಐ ನಂತರದ ಅವಕಾಶಗಳು: 2 ವರ್ಷಗಳ ಐಟಿಐ ನಂತರ ನೀವು ನೇರವಾಗಿ ಡಿಪ್ಲೊಮಾ (Diploma) ಕೋರ್ಸ್‌ನ 2ನೇ ವರ್ಷಕ್ಕೆ ಲ್ಯಾಟರಲ್ ಎಂಟ್ರಿ (Lateral Entry) ಮೂಲಕ ಪ್ರವೇಶ ಪಡೆಯಬಹುದು.ಸಿ.ಐ.ಟಿ.ಎಸ್ (CITS): ನೀವು ಐಟಿಐ ಬೋಧಕರಾಗಲು ಬಯಸಿದರೆ, ಒಂದು ವರ್ಷದ CITS (Craft Instructor Training Scheme) ಕೋರ್ಸ್ ಮಾಡಬಹುದು.

## ಸಿರುಗುಪ್ಪ: ದೇವಲಾಪುರ ಗ್ರಾಮ ದ್ಯಾವಮ್ಮ ದೇವಿ ದೇವಸ್ಥಾನ ಜೀರ್ಣೋದ್ಧಾರಕ್ಕೆ 1.50 ಲಕ್ಷ ರೂ ಶ್ರೀ ಕ್ಷೇತ್ರ ಧರ್ಮಸ್ಥಳದಿಂದ ಮಂಜೂರು: ಎಸ್.ವಸಂತ

ನೈಜ್ಯ ದೆಸೆ ನ್ಯೂಸ್

**ಸಿರುಗುಪ್ಪ: ತಾಲೂಕಿನ ದೇವಲಾಪುರ ಗ್ರಾಮದ ಶ್ರೀ ದ್ಯಾವಮ್ಮದೇವಿ ದೇವಸ್ಥಾನದ ಜೀರ್ಣೋದ್ಧಾರಕ್ಕೆ ಶ್ರೀ ಕ್ಷೇತ್ರ ಧರ್ಮಸ್ಥಳದದಿಂದ ಮಂಜೂರಾತಿಗೊಂಡ ಒಂದು ಲಕ್ಷ ಐವತ್ತು ಸಾವಿರ ರೂಪಾಯಿಗಳ ಮೊತ್ತದ ಡಿ ಡಿ ಯನ್ನು ಶ್ರೀ ದ್ಯಾವಮ್ಮದೇವಿ ದೇವಸ್ಥಾನದ ಸಮಿತಿಗೆ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ತಾಲೂಕು ಕ್ಷೇತ್ರ ಯೋಜನಾಧಿಕಾರಿ ಎಸ್. ವಸಂತ ವಿತರಿಸಿದರು.**

ನಂತರ ಮಾತನಾಡಿದ ಅವರು ಸರ್ವ ಧರ್ಮ ಧಾರ್ಮಿಕ ಶ್ರದ್ಧಾ ಕೇಂದ್ರಗಳ ಅಭಿವೃದ್ಧಿಗೆ ಶ್ರೀ ಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿಗಳಾದ ಡಾ. ಡಿ. ವೀರೇಂದ್ರ ಹೆಗ್ಗಡೆಯವರು ಧನ ಸಹಾಯ ಮಾಡುವುದರ ಮೂಲಕ ಧಾರ್ಮಿಕ ಪರಂಪರೆ ಉಳಿವಿಗೆ ಶ್ರಮಿಸುತ್ತಿದ್ದಾರೆ ಧಾರ್ಮಿಕ ಕೇಂದ್ರಗಳಲ್ಲಿ ಶ್ರದ್ಧೆ ಮತ್ತು ಭಕ್ತಿ ಭಾವ, ಆಧ್ಯಾತ್ಮಿಕತೆ ಹೆಚ್ಚಿಸಲು



ಹಳೆಯ ದೇವಸ್ಥಾನಗಳ ಜೀರ್ಣೋದ್ಧಾರಕ್ಕೆ ಸಹಾಯ ಹಸ್ತ ಚಾಚುತಿದ್ದು, ರಾಜ್ಯಾದ್ಯಾಂತ ಸಾವಿರಾರು ದೇವಸ್ಥಾನಗಳು, ಮಸೀದಿಗಳು, ಚರ್ಚ್‌ಗಳ ಜೀರ್ಣೋದ್ಧಾರ ಮಾಡಲಾಗಿದೆ ಎಂದು ತಿಳಿಸಿದರು.

ಇದಲ್ಲದೆ ಸಿರುಗುಪ್ಪ ತಾಲೂಕಿನಲ್ಲಿ 359 ದೇವಸ್ಥಾನ, ಮಸೀದಿ, ಚರ್ಚ್‌ಗಳ ಶ್ರದ್ಧಾಕೇಂದ್ರ ಸ್ವಚ್ಛತಾ ಕಾರ್ಯಕ್ರಮ ಮಾಡುವುದರ ಜೊತೆಗೆ ದೇವಸ್ಥಾನಗಳಲ್ಲಿ ಕಸ ವಿಲೇವಾರಿಗೆ ಪರಿಕರಗಳನ್ನು ವಿತರಿಸಲಾಗಿದೆ ಇದರಿಂದ ಎಲ್ಲಾ ಧಾರ್ಮಿಕ ಶ್ರದ್ಧಾ ಕೇಂದ್ರಗಳು ಸ್ವಚ್ಚತೆಯಿಂದ ಇರುವಂತೆ ನೋಡಿಕೊಳ್ಳಲು ಶ್ರಮಿಸಲಾಗುತ್ತಿದೆ . ಶ್ರೀ ಕ್ಷೇತ್ರ ಧರ್ಮಸ್ಥಳ ರಾಜ್ಯಾದ್ಯಂತ ಧಾರ್ಮಿಕ ಕ್ರಾಂತಿ ಮಾಡುತ್ತಿದೆ, ಇಲ್ಲಿ ಯಾವುದೇ ಜಾತಿ ಧರ್ಮದ ಬೇಧವಿಲ್ಲದೆ ಎಲ್ಲರನ್ನೂ ಸಮಾನವಾಗಿ ಕಾಣುತ್ತಿದೆ, ಸಾಮಾಜಿಕ ಕಳಕಳಿಯ ಕೆಲಸಗಳು ಇನ್ನೂ ಸದಾಕಾಲ ನಡೆಯುತ್ತವೆ ಎಂದು ಹೇಳಿದರು.

ಈ ಸಂದರ್ಭ ಸಮಿತಿ ಅಧ್ಯಕ್ಷರಾದ ವೆಂಕಟೇಶ, ಉಪಾಧ್ಯಕ್ಷರಾದ ಕೆ. ನಾಗರಾಜ, ಪ್ರಧಾನ ಕಾರ್ಯದರ್ಶಿಯಾದ ಶೇಖರಪ್ಪ, ಸಹ ಕಾರ್ಯದರ್ಶಿಗಳಾದ ಮಲ್ಲಿಕಾರ್ಜುನ, ಖಜಾಂಚಿ ಲಿಂಗಾರೆಡ್ಡಿ ಹಾಗೂ ಸರ್ವ ಸದಸ್ಯರು ಮತ್ತು ಗ್ರಾಮ ಪಂಚಾಯಿತಿ ಮಾಜಿ ಸದಸ್ಯರಾದ ಕೆ.ಜಗದೀಶ, ಕೆ. ಪಂಪಾಪತಿ ಹಾಗೂ ಕೃಷಿ ಮೇಲ್ವಿಚಾರಕ ವೀರೇಶ, ವಲಯದ ಮೇಲ್ವಿಚಾರಕಿ ರಾಧಿಕಾ, ಸೇವಾಪ್ರತಿನಿಧಿ ವಸಂತ, ಊರಿನ ಮುಖಂಡರು, ಗಣ್ಯರು ಉಪಸ್ಥಿತರಿದ್ದರು.

ವರದಿ : ಮಸೀದಿ,ಅಬ್ದುಲ್ ಗೌಸ್, ಸಿರುಗುಪ್ಪ

## ಹಸಿರು ಸಂಶ್ಲೇಷಿತ ನ್ಯಾನೊಪಾರ್ಟಿಕಲ್‌ಗಳ ಸಂಶೋಧನೆ

### ಭಾರತಕ್ಕೆ ಅದರ ಮಹತ್ವ ತುಮಕೂರು ವಿಶ್ವವಿದ್ಯಾಲಯದ ಜೀವರಸಾಯನಶಾಸ್ತ್ರ ವಿಭಾಗದ ಕೊಡುಗೆ

**ಭಾರತದಂತಹ ದೊಡ್ಡ ಜನಸಂಖ್ಯೆ ಮತ್ತು ಸೀಮಿತ ಆರೋಗ್ಯ ಸಂಪನ್ಮೂಲ ಹೊಂದಿರುವ ದೇಶಕ್ಕೆ ಕಡಿಮೆ ವೆಚ್ಚದಲ್ಲಿ ಪರಿಣಾಮಕಾರಿಯಾದ ಚಿಕಿತ್ಸಾ ವಿಧಾನಗಳನ್ನು ಕಂಡುಹಿಡಿಯುವುದು ಅನಿವಾರ್ಯವಾಗಿದೆ. ಈ ನಿಟ್ಟಿನಲ್ಲಿ ತುಮಕೂರು ವಿಶ್ವವಿದ್ಯಾಲಯದ ಜೀವರಸಾಯನಶಾಸ್ತ್ರ ವಿಭಾಗದಲ್ಲಿ ಹಸಿರು ಸಂಶ್ಲೇಷಿತ ನ್ಯಾನೊಪಾರ್ಟಿಕಲ್‌ಗಳ ಮೇಲೆ ನಡೆಯುತ್ತಿರುವ ಸಂಶೋಧನೆ ಮಹತ್ವದ ಹೆಜ್ಜೆಯಾಗಿದೆ. ಸಸ್ಯಗಳ ಸಾರ ಬಳಸಿ ತಯಾರಿಸಿದ ಈ ನ್ಯಾನೊಪಾರ್ಟಿಕಲ್‌ಗಳು ಕ್ಯಾನ್ಸರ್ ವಿರೋಧಿ, ರಕ್ತ ಹೆಪ್ಪುಗಟ್ಟುವಿಕೆ ನಿಯಂತ್ರಣ, ಥ್ರಾಂಬೋಲೈಟಿಕ್ ಮತ್ತು ಸೂಕ್ಷ್ಮಾಣು ನಾಶಕ ಚಟುವಟಿಕೆಗಳಲ್ಲಿ ಭರವಸೆಯ ಫಲಿತಾಂಶ ತೋರಿಸಿವೆ.**

ಭಾರತದಲ್ಲಿ ಕ್ಯಾನ್ಸರ್ ಪರಿಸ್ಥಿತಿ ದಿನೇ ದಿನೇ ಗಂಭೀರವಾಗುತ್ತಿದೆ. ಇಂಡಿಯನ್ ಕೌನ್ಸಿಲ್ ಆಫ್ ಮೆಡಿಕಲ್ ರಿಸರ್ಚ್‌ನ 2024ರ ಅಂದಾಜಿನ ಪ್ರಕಾರ ದೇಶದಲ್ಲಿ ಪ್ರತಿ ವರ್ಷ 14.6 ಲಕ್ಷ ಹೊಸ ಕ್ಯಾನ್ಸರ್ ಪ್ರಕರಣಗಳು ದಾಖಲಾಗುತ್ತಿವೆ . ಪ್ರತಿ ಲಕ್ಷ ಜನರಿಗೆ ಸುಮಾರು 100ರಿಂದ 110 ಜನರು ಕ್ಯಾನ್ಸರ್‌ಗೆ ತುತ್ತಾಗುತ್ತಿದ್ದಾರೆ. ಮಹಿಳೆಯರಲ್ಲಿ ಸ್ತನ ಮತ್ತು ಗರ್ಭಕಂಠದ ಕ್ಯಾನ್ಸರ್, ಪುರುಷರಲ್ಲಿ ಬಾಯಿ, ಶ್ವಾಸಕೋಶ ಮತ್ತು ಅನ್ನನಾಳದ ಕ್ಯಾನ್ಸರ್ ಹೆಚ್ಚಾಗಿ ಕಂಡುಬರುತ್ತದೆ. 2022ರಲ್ಲಿ ಮಾತ್ರ ಸುಮಾರು 8.08 ಲಕ್ಷ ಜನರು ಕ್ಯಾನ್ಸರ್‌ನಿಂದ ಮೃತಪಟ್ಟಿದ್ದಾರೆ. ದೊಡ್ಡ ಸಮಸ್ಯೆ ಎಂದರೆ 60ರಿಂದ 70 ಶೇಕಡಾ ರೋಗಿಗಳು ಮೂರನೇ ಅಥವಾ ನಾಲ್ಕನೇ ಹಂತದಲ್ಲಿ ಆಸ್ಪತ್ರೆಗೆ ಬರುತ್ತಾರೆ. ಆ ಸಮಯದಲ್ಲಿ ಕೀಮೋಥೆರಪಿ, ರೇಡಿಯೋಥೆರಪಿ ಮತ್ತು ಶಸ್ತ್ರಚಿಕಿತ್ಸೆ ಮಾತ್ರ ಉಳಿದ ಆಯ್ಕೆಗಳಾಗುತ್ತವೆ.

ಒಂದು ಸೈಕಲ್ ಕೀಮೋಥೆರಪಿಗೆ 20,000ದಿಂದ 2 ಲಕ್ಷ ರೂಪಾಯಿ ಖರ್ಚಾಗುತ್ತದೆ ಮತ್ತು ವಾಕರಿಕೆ, ರೋಗ ನಿರೋಧಕ ಶಕ್ತಿ ಕುಸಿತ, ಕೂದಲು ಉದುರುವಿಕೆಯಂತಹ ಅಡ್ಡಪರಿಣಾಮಗಳು ರೋಗಿಯನ್ನು ದೈಹಿಕವಾಗಿ ಮತ್ತು ಮಾನಸಿಕವಾಗಿ ದುರ್ಬಲಗೊಳಿಸುತ್ತವೆ. ತುಮಕೂರು ವಿಶ್ವವಿದ್ಯಾಲಯದ ಜೀವರಸಾಯನಶಾಸ್ತ್ರ ವಿಭಾಗದಲ್ಲಿ ನಡೆಯುತ್ತಿರುವ ಸಂಶೋಧನೆಯಲ್ಲಿ ಸಸ್ಯ ಆಧಾರಿತ ನ್ಯಾನೊಪಾರ್ಟಿಕಲ್‌ಗಳು ಕ್ಯಾನ್ಸರ್ ಕೋಶಗಳ ವಿಭಜನೆಯನ್ನು ತಡೆದು ಆಯ್ದ ವಿಷತ್ವ ತೋರಿಸಿರುವುದು ಕಂಡುಬಂದಿದೆ. MTT ಚಿಕಿಥಿ ಪರೀಕ್ಷೆಗಳಲ್ಲಿ ಈ ನ್ಯಾನೊಪಾರ್ಟಿಕಲ್‌ಗಳು ಸಾಮಾನ್ಯ ಕೋಶಗಳಿಗೆ ಕಡಿಮೆ ಹಾನಿ ಮಾಡಿ ಕ್ಯಾನ್ಸರ್ ಕೋಶಗಳ ಮೇಲೆ ಮಾತ್ರ ಪರಿಣಾಮ ಬೀರಿವೆ. ಇದು ಭವಿಷ್ಯದಲ್ಲಿ ಕಡಿಮೆ ಅಡ್ಡಪರಿಣಾಮದ ಗುರಿ ಆಧಾರಿತ ಚಿಕಿತ್ಸೆಗೆ ದಾರಿ ತೆರೆಯುತ್ತದೆ.

ಹೃದಯ ಸಂಬಂಧಿ ಕಾಯಿಲೆಗಳು ಭಾರತದಲ್ಲಿ ಸಾವಿಗೆ ಎರಡನೇ ದೊಡ್ಡ ಕಾರಣವಾಗಿದೆ. ವಿಶ್ವ ಆರೋಗ್ಯ ಸಂಸ್ಥೆಯ 2023ರ ವರದಿಯ ಪ್ರಕಾರ ದೇಶದಲ್ಲಿ ಪ್ರತಿ ವರ್ಷ 28 ಲಕ್ಷ ಜನರು ಹೃದಯ ಸಂಬಂಧಿ ಕಾಯಿಲೆಗಳಿಂದ ಸಾಯುತ್ತಾರೆ. ಇದು ಒಟ್ಟು ಸಾವಿನ ಸಂಖ್ಯೆಯ 28 ಶೇಕಡಾ ಆಗಿದೆ. ರಕ್ತ ಹೆಪ್ಪುಗಟ್ಟುವಿಕೆ ಮತ್ತು ಥ್ರಾಂಬೋಸಿಸ್ ಈ ಸಾವುಗಳಿಗೆ ಮುಖ್ಯ ಕಾರಣ. ಇಸ್ಕೆಮಿಕ್ ಸ್ಟ್ರೋಕ್, ಕೊರೊನರಿ ಆರ್ಟರಿ ಡಿಸೀಸ್, ಡೀಪ್ ವೇನ್ ಥ್ರಾಂಬೋಸಿಸ್ ಮತ್ತು ಪಲ್ಮನರಿ ಎಂಬಾಲಿಸಮ್ ಇವೆಲ್ಲವೂ ಅಸಹಜ ರಕ್ತ ಹೆಪ್ಪುಗಟ್ಟುವಿಕೆಯಿಂದ ಉಂಟಾಗುತ್ತವೆ. ಭಾರತದಲ್ಲಿ ಪ್ರತಿ ವರ್ಷ ಸುಮಾರು 1.8 ಲಕ್ಷ ಜನರು ಇಸ್ಕೆಮಿಕ್ ಸ್ಟ್ರೋಕ್‌ಗೆ ತುತ್ತಾಗುತ್ತಾರೆ ಮತ್ತು ಅದರಲ್ಲಿ 30 ಶೇಕಡಾ ಜನರು ಮೊದಲ ವರ್ಷದಲ್ಲಿಯೇ ಮೃತಪಡುತ್ತಾರೆ. ಪ್ರಸ್ತುತ ಚಿಕಿತ್ಸೆಗೆ ಬಳಸುವ ಸ್ಟ್ರೆಪ್ಟೋಕೈನೇಸ್, ಯುರೋಕೈನೇಸ್ ಮತ್ತು ಆಲ್ಟಿಪ್ಲೇಸ್‌ನಂತಹ ಥ್ರಾಂಬೋಲೈಟಿಕ್ ಔಷಧಿಗಳ ಬೆಲೆ ತುಂಬಾ ಹೆಚ್ಚು. ಒಂದು ಡೋಸ್ ಸ್ಟ್ರೆಪ್ಟೋಕೈನೇಸ್‌ಗೆ




3000ದಿಂದ 5000 ರೂಪಾಯಿ, ಆಲ್ಟಿಪ್ಲೇಸ್‌ಗೆ 30,000ದಿಂದ 50,000 ರೂಪಾಯಿ ತಗಲುತ್ತದೆ. ಜೊತೆಗೆ ರಕ್ತಸ್ರಾವ ಮತ್ತು ಅಲರ್ಜಿಯ ಅಪಾಯವೂ ಇದೆ. ಸರ್ಕಾರಿ ಆಸ್ಪತ್ರೆಗಳಲ್ಲೂ ಈ ಔಷಧಿಗಳ ಲಭ್ಯತೆ ಸೀಮಿತವಾಗಿದೆ. ತುಮಕೂರು ವಿಶ್ವವಿದ್ಯಾಲಯದ ಜೀವರಸಾಯನಶಾಸ್ತ್ರ ವಿಭಾಗದಲ್ಲಿ ನಡೆದ ಪ್ರಯೋಗಗಳಲ್ಲಿ ಹಸಿರು ಸಂಶ್ಲೇಷಿತ ನ್ಯಾನೊಪಾರ್ಟಿಕಲ್‌ಗಳು PT, APTT ಮತ್ತು ಥ್ರಾಂಬಿನ್ ಟೈಮ್ ಪರೀಕ್ಷೆಗಳಲ್ಲಿ ರಕ್ತ ಹೆಪ್ಪುಗಟ್ಟುವಿಕೆ ಪ್ರಕ್ರಿಯೆಯನ್ನು ನಿಯಂತ್ರಿಸುವ ಸಾಮರ್ಥ್ಯ ತೋರಿಸಿವೆ.

ಫೈಬ್ರಿನೋಲೈಟಿಕ್ ಚಟುವಟಿಕೆ ಪರೀಕ್ಷೆಯಲ್ಲಿ ಇವು ಹೆಪ್ಪುಗಟ್ಟುವಿಕೆಯನ್ನು ಕರಗಿಸುವ ಗುಣಲಕ್ಷಣವನ್ನೂ ಪ್ರದರ್ಶಿಸಿವೆ. ಇದು ಕಡಿಮೆ ವೆಚ್ಚದಲ್ಲಿ ಹೃದಯಾಘಾತ ಮತ್ತು ಪಾರ್ಶ್ವವಾಯುವಿನ ಚಿಕಿತ್ಸೆಗೆ ಹೊಸ ಆಯ್ಕೆಯಾಗಬಹುದು. ಮೂರನೇ ದೊಡ್ಡ ಸವಾಲು ಆಯಂಟಿಬಯೋಟಿಕ್ ನಿರೋಧಕತ್ವ. ಲ್ಯಾನ್ಸೆಟ್ 2019ರ ವರದಿಯ ಪ್ರಕಾರ ಭಾರತದಲ್ಲಿ ಪ್ರತಿ ವರ್ಷ 2.97 ಲಕ್ಷ ಜನರು ಆ?ಯಂಟಿಬಯೋಟಿಕ್ ನಿರೋಧಕ ಸೋಂಕಿನಿಂದ ಸಾಯುತ್ತಾರೆ. ಇದು ಜಾಗತಿಕ ಸಾವಿನ ಸಂಖ್ಯೆಯ 25 ಶೇಕಡಾ ಆಗಿದೆ. 5 ವರ್ಷದೊಳಗಿನ 60,000ಕ್ಕೂ ಹೆಚ್ಚು ನವಜಾತ ಶಿಶುಗಳು ನಿರೋಧಕ ಬ್ಯಾಕ್ಟೀರಿಯಾದ ಸೋಂಕಿನಿಂದ ಸಾಯುತ್ತವೆ.

ಗ್ರಾಮೀಣ ಪ್ರದೇಶಗಳಲ್ಲಿ ವೈದ್ಯರ ಸಲಹೆ ಇಲ್ಲದೆ ಆಯಂಟಿಬಯೋಟಿಕ್ ತೆಗೆದುಕೊಳ್ಳುವ ಪ್ರಮಾಣ 60 ಶೇಕಡಾಕ್ಕಿಂತ ಹೆಚ್ಚು. ಇದರಿಂದಾಗಿ ಎಸ್ಚೆರಿಚಿಯಾ ಕೋಲಿ, ಕ್ಲೆಬ್ಸಿಯೆಲ್ಲಾ ನ್ಯೂಮೋನಿಯಾ, ಸ್ಟ್ಯಾಫಿಲೋಕೊಕಸ್ ಔರಿಯಸ್ ಮತ್ತು ಸ್ಯೂಡೋಮೋನಸ್ ಏರುಜಿನೋಸಾ ಮುಂತಾದ ಬ್ಯಾಕ್ಟೀರಿಯಾಗಳು ಬಹುತೇಕ ಎಲ್ಲಾ ಸಾಮಾನ್ಯ ಆ?ಯಂಟಿಬಯೋಟಿಕ್‌ಗಳಿಗೆ ನಿರೋಧಕವಾಗಿವೆ. ಆಸ್ಪತ್ರೆಗಳಲ್ಲಿ ಸೋಂಕಿನ ಪ್ರಮಾಣವೂ ಹೆಚ್ಚಾಗಿದೆ. ಪ್ರತಿ 100 ರೋಗಿಗಳಲ್ಲಿ 10ರಿಂದ 15 ಜನರಿಗೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುವಾಗ ಹೊಸ ಸೋಂಕು ತಗಲುತ್ತದೆ. ಹೊಸ ಆ?ಯಂಟಿಬಯೋಟಿಕ್ ಅಭಿವೃದ್ಧಿ ಕಳೆದ 20 ವರ್ಷಗಳಲ್ಲಿ ಬಹಳ ನಿಧಾನವಾಗಿದೆ.

ತುಮಕೂರು ವಿಶ್ವವಿದ್ಯಾಲಯದ ಜೀವರಸಾಯನಶಾಸ್ತ್ರ ವಿಭಾಗದ ಸಂಶೋಧಕರು ಸಸ್ಯ ಆಧಾರಿತ ಬೆಳ್ಳಿ, ಸತು ಆಕ್ಸೈಡ್ ಮತ್ತು ತಾಮ್ರ ಆಕ್ಸೈಡ್ ನ್ಯಾನೊಪಾರ್ಟಿಕಲ್‌ಗಳನ್ನು ತಯಾರಿಸಿ ಅವು ಗ್ರಾಮ್ ಪಾಸಿಟಿವ್ ಮತ್ತು ಗ್ರಾಮ್ ನೆಗೆಟಿವ್ ಬ್ಯಾಕ್ಟೀರಿಯಾಗಳು ಹಾಗೂ ಶಿಲೀಂಧ್ರಗಳ ವಿರುದ್ಧ ಬಲವಾದ ಚಟುವಟಿಕೆ ತೋರಿಸಿರುವುದನ್ನು ದಾಖಲಿಸಿದ್ದಾರೆ. ಅಗರ್ ವೆಲ್ ಡಿಫ್ಯೂಷನ್ ಮತ್ತು ಬ್ರೋತ್ ಮೈಕ್ರೋಡಿಲ್ಯೂಷನ್ ಪರೀಕ್ಷೆಗಳಲ್ಲಿ ಇವು ನಿರೋಧಕ ಬ್ಯಾಕ್ಟೀರಿಯಾಗಳ ಮೇಲೂ ಪರಿಣಾಮ ಬೀರಿವೆ. ಇದು ಭಾರತದ ಆ?ಯಂಟಿಬಯೋಟಿಕ್ ನಿರೋಧಕತ್ವ ಸಮಸ್ಯೆಗೆ ಪರ್ಯಾಯ ಪರಿಹಾರವಾಗಬಹುದು. ಹಸಿರು ಸಂಶ್ಲೇಷಣೆ ವಿಧಾನವೇ ಭಾರತಕ್ಕೆ ಸೂಕ್ತವಾಗಿದೆ. ಸಾಂಪ್ರದಾಯಿಕ ರಾಸಾಯನಿಕ ವಿಧಾನದಲ್ಲಿ ಸೋಡಿಯಂ ಬೋರೋಹೈಡ್ರೈಡ್, ಹೈಡ್ರಾಜಿನ್ ನಂತಹ ವಿಷಕಾರಿ ರಾಸಾಯನಿಕಗಳು ಮತ್ತು ಹೆಚ್ಚಿನ ಶಕ್ತಿ ಬೇಕಾಗುತ್ತದೆ.

ಇದರಿಂದ ಪರಿಸರ ಮಾಲಿನ್ಯ ಮತ್ತು ಜೈವಿಕ ವಿಷತ್ವದ ಸಮಸ್ಯೆ ಬರುತ್ತದೆ. ಹಸಿರು ಸಂಶ್ಲೇಷಣೆಯಲ್ಲಿ ಬೇವಿನ ಮರ, ಅರಿಶಿನ, ತುಳಸಿ, ಬಿಲ್ವಪತ್ರೆಯಂತಹ ಸ್ಥಳೀಯ ಸಸ್ಯಗಳ ಸಾರವನ್ನು ಬಳಸಿ ನ್ಯಾನೊಪಾರ್ಟಿಕಲ್‌ಗಳನ್ನು ತಯಾರಿಸಲಾಗುತ್ತದೆ. ಈ ಸಾರದಲ್ಲಿರುವ ಫ್ಲೇವನಾಯ್ಡ್, ಆಲ್ಕಲಾಯ್ಡ್, ಟ್ಯಾನಿನ್ ಮತ್ತು ಫೀನಾಲಿಕ್ ಸಂಯುಕ್ತಗಳು ಕಡಿತಗೊಳಿಸುವ ಮತ್ತು ಸ್ಥಿರಗೊಳಿಸುವ ಏಜೆಂಟ್ ಆಗಿ ಕೆಲಸ ಮಾಡುತ್ತವೆ. ಇದರಿಂದ ಹೆಚ್ಚಿನ ತಾಪಮಾನ, ಹೆಚ್ಚಿನ ಒತ್ತಡ ಮತ್ತು ಅಪಾಯಕಾರಿ ರಾಸಾಯನಿಕಗಳ ಅಗತ್ಯವಿರುವುದಿಲ್ಲ. ಭಾರತದಲ್ಲಿ 17,000ಕ್ಕೂ ಹೆಚ್ಚು ಔಷಧೀಯ ಸಸ್ಯ ಪ್ರಭೇದಗಳಿವೆ. ಈ ಸಂಪನ್ಮೂಲವನ್ನು ಬಳಸಿ ಗ್ರಾಮೀಣ ಪ್ರದೇಶದಲ್ಲೇ ಸಣ್ಣ ಪ್ರಮಾಣದಲ್ಲಿ ನ್ಯಾನೊಪಾರ್ಟಿಕಲ್ ಉತ್ಪಾದನೆ ಸಾಧ್ಯ. ಇದು ಮೇಕ್ ಇನ್ ಇಂಡಿಯಾ ಮತ್ತು ಆತ್ಮನಿರ್ಭರ ಭಾರತದ ಗುರಿಗೆ ನೇರವಾಗಿ ಪೂರಕವಾಗಿದೆ.

ತುಮಕೂರು ವಿಶ್ವವಿದ್ಯಾಲಯದ ಜೀವರಸಾಯನಶಾಸ್ತ್ರ ವಿಭಾಗವು ಈ ಕ್ಷೇತ್ರದಲ್ಲಿ ಸಕ್ರಿಯವಾಗಿ ಕೆಲಸ ಮಾಡುತ್ತಿದೆ. ವಿಭಾಗದ ಪ್ರಾಧ್ಯಾಪಕರು ಮತ್ತು ಸಂಶೋಧನಾ ವಿದ್ಯಾರ್ಥಿಗಳು ನ್ಯಾನೊಬಯೋಟೆಕ್ನಾಲಜಿ, ಔಷಧೀಯ ಜೀವರಸಾಯನಶಾಸ್ತ್ರ ಮತ್ತು ಪ್ರಕೃತಿ ಆಧಾರಿತ ಔಷಧ ಅಭಿವೃದ್ಧಿಯ ಮೇಲೆ ಗಮನ ಹರಿಸಿದ್ದಾರೆ. ಪ್ರಯೋಗಾಲಯ ಮಟ್ಟದಲ್ಲಿ ತಯಾರಿಸಿದ ನ್ಯಾನೊಪಾರ್ಟಿಕಲ್‌ಗಳ ಭೌತಿಕ, ರಾಸಾಯನಿಕ ಮತ್ತು ಜೈವಿಕ ಗುಣಲಕ್ಷಣಗಳನ್ನು ಗಗಿ-ಗ್ಠಿ ಸ್ಪೆಕ್ಟ್ರೋಸ್ಕೋಪಿ, ಈಖಿಖಖ, ಖಇಓ ಮತ್ತು ಫಿಖಆ ಮೂಲಕ ದೃಢಪಡಿಸಲಾಗುತ್ತದೆ. ನಂತರ ಅವುಗಳ ಜೈವಿಕ ಚಟುವಟಿಕೆಗಳನ್ನು ಕ್ಯಾನ್ಸರ್ ಕೋಶ ಸಾಲುಗಳು, ಬ್ಯಾಕ್ಟೀರಿಯಾ, ಶಿಲೀಂಧ್ರ ಮತ್ತು ರಕ್ತ ಹೆಪ್ಪುಗಟ್ಟುವಿಕೆ ಮಾದರಿಗಳ ಮೇಲೆ ಪರೀಕ್ಷಿಸಲಾಗುತ್ತದೆ.

ಈ ಸಂಶೋಧನೆಯ ಫಲಿತಾಂಶಗಳನ್ನು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಜರ್ನಲ್‌ಗಳಲ್ಲಿ ಪ್ರಕಟಿಸಲಾಗಿದೆ. ವಿದ್ಯಾರ್ಥಿಗಳು ಈ ಯೋಜನೆಗಳಲ್ಲಿ ತೊಡಗಿಸಿಕೊಳ್ಳುವುದರಿಂದ ಅವರಿಗೆ ಪ್ರಾಯೋಗಿಕ ಅನುಭವ ಮತ್ತು ಸಂಶೋಧನಾ ಕೌಶಲ್ಯಗಳು ಲಭಿಸುತ್ತವೆ. ಭಾರತ ಸರ್ಕಾರದ ಆರೋಗ್ಯ ನೀತಿಯ ದೃಷ್ಟಿಯಿಂದಲೂ ಈ ಸಂಶೋಧನೆ ಮಹತ್ವದ್ದಾಗಿದೆ. ನ್ಯಾಷನಲ್ ಹೆಲ್ತ್ ಪಾಲಿಸಿ 2017 ಮತ್ತು ಆಯುಷ್ಮಾನ್ ಭಾರತ ಯೋಜನೆ ಎರಡೂ ಕೈಗೆಟುಕುವ, ಗುಣಮಟ್ಟದ ಆರೋಗ್ಯ ಸೇವೆಗೆ ಒತ್ತು ಕೊಡುತ್ತವೆ. ಭಾರತದ ಆರೋಗ್ಯ ಬಜೆಟ್ ಜಿಡಿಪಿಯ ಕೇವಲ 1.8 ಶೇಕಡಾ ಇದೆ. ಸೀಮಿತ ಬಜೆಟ್‌ನಲ್ಲಿ ಹೆಚ್ಚಿನ ಜನರಿಗೆ ಚಿಕಿತ್ಸೆ ನೀಡಬೇಕಾದರೆ ಕಡಿಮೆ ವೆಚ್ಚದ ತಂತ್ರಜ್ಞಾನ ಅನಿವಾರ್ಯ.

ಒಂದು ನ್ಯಾನೊಪಾರ್ಟಿಕಲ್ ವ್ಯವಸ್ಥೆ ಕ್ಯಾನ್ಸರ್, ಸೋಂಕು ಮತ್ತು ಹೆಪ್ಪುಗಟ್ಟುವಿಕೆ ಮೂರಕ್ಕೂ ಕೆಲಸ ಮಾಡಿದರೆ ಔಷಧ ಅಭಿವೃದ್ಧಿಯ ವೆಚ್ಚ ಮತ್ತು ಸಮಯ ಎರಡೂ ಉಳಿತಾಯವಾಗುತ್ತದೆ. ಡಿಪಾರ್ಟ್‌ಮೆಂಟ್ ಆಫ್ ಸೈನ್ಸ್ ಅಂಡ್ ಟೆಕ್ನಾಲಜಿ ಮತ್ತು ಡಿಪಾರ್ಟ್‌ಮೆಂಟ್ ಆಫ್ ಬಯೋಟೆಕ್ನಾಲಜಿ ನ್ಯಾನೊಟೆಕ್ನಾಲಜಿಯನ್ನು ಮಿಷನ್ ಮೋಡ್‌ನಲ್ಲಿ ಉತ್ತೇಜಿಸುತ್ತಿವೆ. ನ್ಯಾನೊ ಮಿಷನ್ ಅಡಿಯಲ್ಲಿ 1000 ಕೋಟಿ ರೂಪಾಯಿಗೂ ಹೆಚ್ಚು ಹಣವನ್ನು ಸಂಶೋಧನೆಗೆ ಹಂಚಿಕೆ ಮಾಡಲಾಗಿದೆ. ಭಾರತದಲ್ಲಿ ನ್ಯಾನೊಮೆಡಿಸಿನ್ ಮಾರುಕಟ್ಟೆ 2023ರಲ್ಲಿ 2.5 ಬಿಲಿಯನ್ ಡಾಲರ್ ಇತ್ತು ಮತ್ತು 2030ರ ವೇಳೆಗೆ 8.5 ಬಿಲಿಯನ್ ಡಾಲರ್‌ಗೆ ಬೆಳೆಯುವ ನಿರೀಕ್ಷೆ ಇದೆ. ತುಮಕೂರು ವಿಶ್ವವಿದ್ಯಾಲಯದಂತಹ ಸಂಸ್ಥೆಗಳ ಸಂಶೋಧನೆ ಈ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರ ವಹಿಸಬಹುದು. ಆದರೆ ಸವಾಲುಗಳೂ ಇವೆ. ಪ್ರಯೋಗಾಲಯದಲ್ಲಿ ಉತ್ತಮ ಫಲಿತಾಂಶ ಸಿಕ್ಕರೂ ಅದನ್ನು ಪ್ರಾಣಿ ಮಾದರಿ ಮತ್ತು ಮಾನವ ಪರೀಕ್ಷೆಗೆ ಕೊಂಡೊಯ್ಯಲು ದೊಡ್ಡ ಹಣ ಮತ್ತು ನಿಯಂತ್ರಣ ಮಾನ್ಯತೆ ಬೇಕು.

ಭಾರತದಲ್ಲಿ ನ್ಯಾನೊಪಾರ್ಟಿಕಲ್‌ಗಳ ಸುರಕ್ಷತೆ ಮತ್ತು ವಿಷತ್ವ ಮೌಲ್ಯಮಾಪನಕ್ಕೆ ಸ್ಪಷ್ಟ ಮಾರ್ಗಸೂಚಿಗಳು ಇನ್ನೂ ರೂಪುಗೊಳ್ಳುತ್ತಿವೆ. ಜೊತೆಗೆ ಸಾರ್ವಜನಿಕರಲ್ಲಿ ನ್ಯಾನೊಟೆಕ್ನಾಲಜಿ ಬಗ್ಗೆ ಜಾಗೃತಿ ಕಡಿಮೆ. ಹೀಗಾಗಿ ಸಂಶೋಧಕರು ಫಲಿತಾಂಶಗಳನ್ನು ಸರಳ ಭಾಷೆಯಲ್ಲಿ ಜನರಿಗೆ ತಲುಪಿಸುವುದು ಮುಖ್ಯ. ಪತ್ರಿಕೆಗಳು, ವಿಶ್ವವಿದ್ಯಾಲಯಗಳು ಮತ್ತು ವಿಜ್ಞಾನ ಸಂವಹನ ವೇದಿಕೆಗಳು ಈ ಕೆಲಸ ಮಾಡಬಹುದು. ಸಂಕ್ಷಿಪ್ತವಾಗಿ ಹೇಳುವುದಾದರೆ, ಭಾರತದಲ್ಲಿ ಪ್ರತಿ ವರ್ಷ 14 ಲಕ್ಷಕ್ಕೂ ಹೆಚ್ಚು ಹೊಸ ಕ್ಯಾನ್ಸರ್ ಪ್ರಕರಣಗಳು, 28 ಲಕ್ಷ ಹೃದಯ ಸಂಬಂಧಿ ಸಾವುಗಳು ಮತ್ತು 3 ಲಕ್ಷಕ್ಕೂ ಹೆಚ್ಚು ಆ?ಯಂಟಿಬಯೋಟಿಕ್ ನಿರೋಧಕ ಸೋಂಕಿನಿಂದಾದ ಸಾವುಗಳು ವರದಿಯಾಗುತ್ತಿವೆ.

ಚಿಕಿತ್ಸೆಯ ವೆಚ್ಚ, ಅಡ್ಡಪರಿಣಾಮ ಮತ್ತು ಔಷಧ ಲಭ್ಯತೆಯ ಸಮಸ್ಯೆಗಳು ಈ ಸಂಖ್ಯೆಯನ್ನು ಇನ್ನಷ್ಟು ಗಂಭೀರಗೊಳಿಸುತ್ತಿವೆ. ತುಮಕೂರು ವಿಶ್ವವಿದ್ಯಾಲಯದ ಜೀವರಸಾಯನಶಾಸ್ತ್ರ ವಿಭಾಗದಲ್ಲಿ ನಡೆಯುತ್ತಿರುವ ಹಸಿರು ಸಂಶ್ಲೇಷಿತ ನ್ಯಾನೊಪಾರ್ಟಿಕಲ್‌ಗಳ ಸಂಶೋಧನೆ ಕ್ಯಾನ್ಸರ್, ಹೆಪ್ಪುಗಟ್ಟುವಿಕೆ, ಥ್ರಾಂಬೋಲೈಟಿಕ್ ಮತ್ತು ಸೂಕ್ಷ್ಮಾಣು ನಾಶಕ ಕ್ಷೇತ್ರಗಳಲ್ಲಿ ಕಡಿಮೆ ವೆಚ್ಚದ, ಕಡಿಮೆ ಅಡ್ಡಪರಿಣಾಮದ ಪರಿಹಾರ ನೀಡುವ ಸಾಮರ್ಥ್ಯ ಹೊಂದಿದೆ. ಮುಂದಿನ ಹಂತದಲ್ಲಿ ಪ್ರಿ-ಕ್ಲಿನಿಕಲ್ ಮತ್ತು ಕ್ಲಿನಿಕಲ್ ಪರೀಕ್ಷೆಗಳಲ್ಲಿ ಈ ನ್ಯಾನೊಪಾರ್ಟಿಕಲ್‌ಗಳು ಯಶಸ್ವಿಯಾದರೆ ಭಾರತದ ಆರೋಗ್ಯ ಚಿತ್ರಣವೇ ಬದಲಾಗಬಹುದು ಮತ್ತು ಸಾಮಾನ್ಯ ಜನರಿಗೆ ಕೈಗೆಟುಕುವ ಚಿಕಿತ್ಸೆ ಲಭ್ಯವಾಗಬಹುದು.

**ರಾಜೇಶ ಮೇದಾರ**
ಸಂಶೋಧನಾ ವಿದ್ಯಾರ್ಥಿ, ಜೀವರಾಸಾಯನ ಶಾಸ್ತ್ರ ವಿಭಾಗ, ತುಮಕೂರು ವಿಶ್ವವಿದ್ಯಾಲಯ

## ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯಿಂದ ಮೇ.18ರಿಂದ 20ರವರೆಗೆ ತರಬೇತಿ ಕಾರ್ಯಾಗಾರ

ನೈಜ್ಯ ದೆಸೆ ನ್ಯೂಸ್

**ರಾಯಚೂರು: ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯ ವತಿಯಿಂದ ಸುಧಾರಿತ ದತ್ತಾಂಶ ವಿಜ್ಞಾನ, ಕೃತಕ ಬುದ್ಧಿಮತ್ತೆ ಮತ್ತು ಯಂತ್ರ ಕಲಿಕೆಯನ್ನು ಮೇ.18ರಿಂದ 20ರವರೆಗೆ ಮೂರು ದಿನಗಳ ತರಬೇತಿ ಕಾರ್ಯಾಗಾರವನ್ನು ಅಕಾಡೆಮಿಯ ಕಚೇರಿಯಲ್ಲಿ ಆಯೋಜಿಸಲಾಗುತ್ತಿದೆ.**

ಈ ಕಾರ್ಯಾಗಾರದಲ್ಲಿ ವಿವಿಧ ಪ್ರತಿಷ್ಠಿತ ಸಂಸ್ಥೆಗಳ ಹೆಸರಾಂತ ವಿಜ್ಞಾನಿಗಳು ಮತ್ತು ತಂತ್ರಜ್ಞಾನಿಗಳು ಉಪನ್ಯಾಸಗಳನ್ನು ನೀಡಲಿದ್ದು, ಆಸಕ್ತ ವಿಜ್ಞಾನ ಪದವಿ, ಸ್ನಾತಕೋತ್ತರ ವಿಜ್ಞಾನ ವಿದ್ಯಾರ್ಥಿಗಳು, ಸಂಶೋಧನಾ ವಿದ್ಯಾರ್ಥಿಗಳು, ಉಪನ್ಯಾಸಕರು ಅಥವಾ ಪ್ರಾಧ್ಯಾಪಕರು ಹಾಗೂ ವಿಜ್ಞಾನಾಸಕ್ತರು ಭಾಗವಹಿಸಬಹುದಾಗಿದೆ. ಆಸಕ್ತ ಪ್ರತಿನಿಧಿಗಳು ದಿನಾಂಕ: 16/05/2026ರೊಳಗಾಗಿ Google Form: https://forms.gle/Dyf9KFQ8ShnRLDHH6 ಅಥವಾ ಕಾರ್ಯಾಗಾರದ ಸಂಯೋಜಕರಾದ ಶ್ರೀನಿವಾಸು ವಿ.ಕೆ.ವೈಜ್ಞಾನಿಕಾಧಿಕಾರಿ ಇವರ ಮೊಬೈಲ್ ಸಂಖ್ಯೆ: 9620767819ಗೆ ಸಂಪರ್ಕಿಸಬಹುದಾಗಿದೆ ಅಥವಾ ಅಕಾಡೆಮಿಯ ವೆಬ್ ಸೈಟ್ ವಿಳಾಸ: https://kstacademy.in ವೀಕ್ಷಿಸಬಹುದಾಗಿದೆ ಎಂದು ಅಕಾಡೆಮಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

**ನೈಜ್ಯ ದೆಸೆ**
**ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.**

## ಮಕ್ಕಳಿಗೆ ಒಳ್ಳೆಯ ಶಿಕ್ಷಣ-ಸಂಸ್ಕಾರಗಳನ್ನು ಕಲಿಸಿ: ಕೊಡೆಕಲ್ ಶ್ರೀ

ನೈಜ್ಯ ದೆಸೆ ನ್ಯೂಸ್

**ತಾಳಿಕೋಟಿ: 12ನೇ ಶತಮಾನದಲ್ಲಿ ಬಸವಣ್ಣನವರ ಸಮ ಸಮಾಜ ನಿರ್ಮಾಣದ ಆಂದೋಲನದಲ್ಲಿ ತಮ್ಮ ಅಮೂಲ್ಯ ಕೊಡುಗೆಯನ್ನು ಕಾಯಕಯೋಗಿ ಸಿದ್ದರಾಮೇಶ್ವರರು ನೀಡಿದ್ದಾರೆ ಅಂತಹ ಮಹಾನ್ ಶರಣನ ಅನುಯಾಯಿಗಳು ನೀವಾಗಿದ್ದೀರಿ. ಯಾವುದೇ ರೀತಿಯ ಕೀಳುರಿಮೆಗೆ ಒಳಗಾಗುವುದು ಬೇಡ ಎಂದು ಕೊಡೆಕಲ್ ದುರದುಂಡೇಶ್ವರ ಮಠದ ಮ.ನಿ.ಪ್ರ. ಶ್ರೀ ಶಿವಕುಮಾರ ಮಹಾಸ್ವಾಮಿಗಳು ಹೇಳಿದರು.**

ಪಟ್ಟಣದಲ್ಲಿ ಭೋವಿ ವಡ್ಡರ ಸಮಾಜದ ವತಿಯಿಂದ ಶ್ರೀ ಹುಲಿಗೆಮ್ಮದೇವಿ ಮತ್ತು ಶ್ರೀ ಗದ್ದೆಮ್ಮದೇವಿ ಜಾತ್ರಾ ಮಹೋತ್ಸವ ಅಂಗವಾಗಿ ಸೋಮವಾರ ಸಂಜೆ ಹಮ್ಮಿಕೊಂಡ ಶ್ರೀ ಸಿದ್ದರಾಮೇಶ್ವರ ಭೋವಿ ವಡ್ಡರ ಸಮಾಜ ಕ್ಷೆಮಾಭಿವೃದ್ಧಿ ಸಂಘದ ಪದಾಧಿಕಾರಿಗಳ ಪದಗ್ರಹಣ ಕಾರ್ಯಕ್ರಮದ ದಿವ್ಯ ಸಾನಿಧ್ಯ ವಹಿಸಿ ಆಶೀರ್ವಚನ ನೀಡಿದರು. ಯುವ ಮುಖಂಡ ಭರತಗೌಡ ಪಾಟೀಲ (ನಡಹಳ್ಳಿ)



ಮಾತನಾಡಿ ಸಮಾಜದ ಯುವಕರಲ್ಲಿ ಜಾಗೃತಿ ಬಂದಾಗ ಸಮಾಜದ ಸರ್ವಾಂಗೀಣ ಪ್ರಗತಿ ಸಾಧ್ಯವಾಗುತ್ತದೆ ಅಂತಹ ಪ್ರಯತ್ನ ಮಾಡಿರುವುದಕ್ಕೆ ಅಭಿನಂದಿಸುತ್ತೇನೆ. ನಡಹಳ್ಳಿ ಕುಟುಂಬ ಸದಾ ನಿಮ್ಮ ಜೊತೆಯಲ್ಲಿದೆ ಎಂದರು. ಬಿಜೆಪಿ ಜಿಲ್ಲಾ ಮಾಜಿ ಅಧ್ಯಕ್ಷ ಆರ್ ಎಸ್ ಪಾಟೀಲ ಕೂಚಬಾಳ ಮಾತನಾಡಿ ನಾಡಿನ ಸಂಸ್ಕೃತಿಗೆ ಭೋವಿ ವಡ್ಡರ ಸಮಾಜದ ಕೊಡುಗೆ ಅಪಾರವಾಗಿದೆ.

ಇದು ಎಲ್ಲ ಸಮಾಜಗಳನ್ನು ಪ್ರೀತಿ ಮತ್ತು ಗೌರವದಿಂದ ಕಾಣುವ ಸಮಾಜವಾಗಿದೆ ಎಂದರು. ದಲಿತ ಮುಖಂಡ ಜೈಭೀಮ ಮುತ್ತಗಿ ಮಾತನಾಡಿ ಶತಮಾನಗಳಿಂದ ಶೋಷಣೆಗೆ ಒಳಗಾದಂತಹ ಸಣ್ಣ ಸಮಾಜಗಳು ಯಾರ ಮೇಲೆಯೂ ಅವಲಂಬಿತರಾಗದೆ ಜಾಗೃತಿಯನ್ನು ಬೆಳೆಸಿಕೊಂಡು, ತಮ್ಮ ಹಕ್ಕುಗಳನ್ನು ಪಡೆಯಲು ಪ್ರಯತ್ನಿಸಬೇಕು. ಸರ್ಕಾರದಿಂದ ಸಿಗುವ ಸೌಲಭ್ಯಗಳನ್ನು



ಸಮಾಜದ ಜನರಿಗೆ ತಲುಪಿಸುವ ಕೆಲಸ ಆಗಬೇಕು, ಆರ್ಥಿಕ ಪ್ರಗತಿಯಿಂದಲೇ ಸಮಾಜದ ಬೆಳವಣಿಗೆ ಸಾಧ್ಯ ಎಂದರು. ಆನಂದಕುಮಾರ ಡಿ.ಕೆ.(ಹುಣಸಗಿ) ಪ್ರಾಸ್ತಾವಿಕವಾಗಿ ಮಾತನಾಡಿದರು. ಸಾಹಿತಿ ಬಸವರಾಜ ಗೊರಜಿ, ಶಿಕ್ಷಕ ಸಾಹೇಬಗೌಡ ಬಿರಾದಾರ ಕಾರ್ಯಕ್ರಮ ನಿರ್ವಹಿಸಿದರು. ಸಂಘದ ನೂತನ ಪದಾಧಿಕಾರಿಗಳ ಪದಗ್ರಹಣ ಹಾಗೂ ಸನ್ಮಾನ ಕಾರ್ಯಕ್ರಮ ಜರುಗಿತು.

ಕುಮಾರಿ ಸೃಷ್ಟಿ ಹಿರೇಮಠ ಭರತನಾಟ್ಯ ಪ್ರದರ್ಶಿಸಿದರು. ಕಾರ್ಯಕ್ರಮದಲ್ಲಿ ಬಿಜೆಪಿ ಯುವ ಮುಖಂಡ ಹಣಮಂತ ನಾಯಕ (ಬಬ್ಲುಗೌಡ), ಮುಸ್ಲಿಂ ಬ್ಯಾಂಕ್ ಅಧ್ಯಕ್ಷ ಮೆಹೆಬೂಬ ಕೆಂಭಾವಿ, ಭೋವಿ ಸಮಾಜದ ಅಧ್ಯಕ್ಷ ಹಣಮಂತ ಕಟ್ಟಿಮನಿ, ಕ್ಷೆಮಾಭಿವೃದ್ಧಿ ಸಂಘದ ಗೌರವ ಅಧ್ಯಕ್ಷ ದ್ಯಾವಪ್ಪ ಕೂಚಬಾಳ, ಅಧ್ಯಕ್ಷ ಶ್ರೀನಿವಾಸ್ ಕುಲಕರ್ಣಿ, ಕಾಂಗ್ರೆಸ್ ಯುವ ಮುಖಂಡ ಸಂಗನಗೌಡ ಅಸ್ಕಿ, ಧರ್ಮಯುದ್ಧ ಪತ್ರಿಕೆ ಸಂಪಾದಕ ಪುಂಡಲೀಕ ಮುರಾಳ, ಪುರಸಭೆ ಮಾಜಿ ಸದಸ್ಯರಾದ ಅಕ್ಕಮಹಾದೇವಿ ಕಟ್ಟಿಮನಿ, ಪ್ರಕಾಶ ಹಜೇರಿ, ದಲಿತ ಯುವ ಮುಖಂಡ ನಾಗೇಶ ಕಟ್ಟಿಮನಿ, ನ್ಯಾಯವಾದಿ ಕಾರ್ತಿಕ್ ಕಟ್ಟಿಮನಿ,

ಗಣ್ಯ ವರ್ತಕ ರಾಜು ಹಂಚಾಟೆ, ಬಿಜೆಪಿ ಯುವ ಮುಖಂಡ ಶಿವಶಂಕರ ಹಿರೇಮಠ, ಮುಸ್ಲಿಂ ಬ್ಯಾಂಕ್ ನಿರ್ದೇಶಕ ಸಿಕಂದರಬಾಷಾ ಡೋಣಿ, ಬಿಜೆಪಿ ಯುವ ಮುಖಂಡ ಸನಾ ಕೆಂಭಾವಿ, ಡಿಎಸ್‌ಎಸ್ ತಾಲೂಕ ಸಂಚಾಲಕ ಮಹೇಶ ಚಲವಾದಿ, ಕಾಂಗ್ರೆಸ್ ಯುವ ಮುಖಂಡ ಆಸೀಫ್ ಕೆಂಭಾವಿ, ಮಯೂರ ಪಾಟೀಲ, ಸಂಜೀವಪ್ಪ ಬರ್ದೇನಾಳ, ಶ್ರೀ ಸಿದ್ದರಾಮೇಶ್ವರ ಭೋವಿ ವಡ್ಡರ ಸಮಾಜ ಕ್ಷೇಮಾಭಿವೃದ್ಧಿ ಸಂಘದ ಸದಸ್ಯರು ಸಮಾಜದ ಗಣ್ಯರು ಹಿರಿಯರು ಉಪಸ್ಥಿತರಿದ್ದರು.

OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINTERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101 KARNATAKA, EDITOR BY: IRFAN K PH NO.